ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರವರಿ 2017

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-17 ಸಂಚಿಕೆ-2 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಇಪ್ಪತ್ತೈದನೆಯ ವರ್ಷದ "ಶ್ರೀ ಶಾರದಾ ಕ್ರಿಕೆಟ್ ಟ್ರೋಫಿ"


ಶ್ರೀಶಾರದಾ ಟ್ರೋಫಿ ವಿಜೇತ ಬೆಂಗಳೂರು ತಂಡ


ಸಮಾರೋಪ ಸಮಾರಂಭ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಯುವವೇದಿಕೆಯ ವತಿಯಿಂದ ನಮ್ಮ ಸಮಾಜ ಬಾಂಧವರಿಗಾಗಿ ಪ್ರತಿವರ್ಷದಂತೆ ಕ್ರಿಕೆಟ್ ಪಂದ್ಯಾಟವನ್ನು ತಾ.22-01-2017ನೇ ರವಿವಾರ ಉಡುಪಿಯ ಎಂ.ಜಿ.ಎಂ ಕಾಲೇಜಿನ ಮೈದಾನದಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರು ಸೇರಿದಂತೆ ಒಟ್ಟು ಒಂಭತ್ತು ತಂಡಗಳು ಈ ಪಂದ್ಯಾಟದಲ್ಲಿ ಭಾಗವಹಿಸಿದ್ದವು. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಈ ಪಂದ್ಯಾಟವನ್ನು ಸತತ ಇಪ್ಪತ್ತೈದು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು ಈ ಹಿನ್ನೆಲೆಯಲ್ಲಿ ಈ ವರ್ಷದ ಪಂದ್ಯಾಟವನ್ನು ವಿಶೇಷ ಮೆರುಗಿನೊಂದಿಗೆ ನಡೆಯಿಸಲಾಯಿತು.

ಬೆಳಗ್ಗಿನ ಉಪಾಹಾರದ ನಂತರ ಎಂ.ಜಿ.ಎಂ ಕಾಲೇಜಿನ ಮೈದಾನದಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ನಮ್ಮ ಸಮಾಜದ ಹಿರಿಯ ಅಂತಾರಾಷ್ಟ್ರೀಯ ಕ್ರೀಡಾಪಟು ಶ್ರೀ ವೈ ಕುಮಾರಸ್ವಾಮಿ ಇವರು ಮುಖ್ಯ ಅತಿಥಿಯಾಗಿ ಆಗಮಿಸಿ ಕೇಸರಿ ಬಿಳಿ ಹಸುರಿನ ಬಲೂನುಗಳನ್ನು ಹಾರಿ ಬಿಡುವ ಮೂಲಕ ಪಂದ್ಯಗಳನ್ನು ಉದ್ಘಾಟಿಸಿದರು. ದುಡಿಯುವ ಯಂತ್ರಗಳಾಗದೆ ನಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಹಾಗೂ ಸುಸ್ಥಿತಿಯಲ್ಲಿಡಲು ಕ್ರೀಡಾ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರಬೇಕು ಎಂದು ಸಮಾಜಬಾಂಧವರಿಗೆ ಅವರು ಕರೆ ನೀಡಿದರು. ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರು ನಮ್ಮ ಸಮಾಜದ ಯುವಕರನ್ನು ಸಂಘಟಿಸುವ ಉದ್ದೇಶದಿಂದ ಈ ಪಂದ್ಯಾಟವನ್ನು ಆಯೋಜಿಸಿದ್ದೇವೆ ಹಾಗಾಗಿ ಇಲ್ಲಿ ಸೋಲು ಗೆಲುವು ಮುಖ್ಯವಲ್ಲ ಕ್ರೀಡಾ ಮನೋಭಾವದಿಂದ ಆಟವಾಡಿ ಎಂದು ನುಡಿದರು. ಭಾಗವಹಿಸಿದ ಎಲ್ಲಾ ಕ್ರೀಡಾಳುಗಳಿಗೆ ಹಾಗೂ ಕ್ರೀಡಾಭಿಮಾನಿಗಳಿಗೆ 25ನೇ ವರುಷದ ಟ್ರೋಫಿಯ ಚಿಹ್ನೆಯುಳ್ಳ ಕ್ಯಾಪ್‌ನ್ನು ವಿತರಿಸಲಾಯಿತು. ಡಾ। ವೈ. ಸುದರ್ಶನ ರಾವ್ ಸ್ವಾಗತಿಸಿದರು, ಶ್ರೀ ಐ.ಕೆ. ಜಯಚಂದ್ರ ರಾವ್ ವಂದಿಸಿದರು. ಶ್ರೀ ಹೆರ್ಗ ನಿರಂಜನ ರಾಯರು ಕಾರ್ಯಕ್ರಮವನ್ನು ನಿರ್ವಹಿಸಿದರು. ಮುಂದೆ ರೋಚಕವಾಗಿ ನಡೆದ ಪಂದ್ಯಾವಳಿಯಲ್ಲಿ ಬೆಂಗಳೂರು ತಂಡ ಪ್ರಥಮ ಸ್ಥಾನವನ್ನೂ ಉಡುಪಿ ತಂಡ ದ್ವಿತೀಯ ಸ್ಥಾನವನ್ನೂ ಪಡೆಯಿತು. ಉಡುಪಿ, ಬೆಂಗಳೂರು, ಬಾರ್ಕೂರು, ಕುಂದಾಪುರ, ನಂದಳಿಕೆ, ಬೆಳ್ಳಂಗಡಿ, ಉಡುಪಿ, ಕಟಪಾಡಿ ಮತ್ತು ಪಡುಬಿದ್ರೆಗಳಿಂದ ತಂಡಗಳು ಭಾಗವಹಿಸಿದ್ದವು. ಸಂಜೆಯ ನಂತರ ಹಿರಿಯ ನಾಗರಿಕರ ಎರಡು ತಂಡಗಳ ನಡುವೆ ಸೌಹಾರ್ದ ಪಂದ್ಯಾಟ ನಡೆಯಿತು.

ಸಂಜೆ ನಡೆದ ಬಹುಮಾನ ವಿತರಣಾ ಹಾಗೂ ಸಮಾರೋಪ ಸಮಾರಂಭದಲ್ಲಿ ಸಿಂಡಿಕೇಟ್ ಬ್ಯಾಂಕಿನ ವಿಶ್ರಾಂತ ಡಿ.ಜಿ.ಎಂ ರಾದ ಶ್ರೀ ಐ.ಪಿ ನಾಗರಾಜ ರಾಯರು ಹಾಗೂ ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಯ ಖ್ಯಾತ ಎಲುಬು ಕೀಲು ತಜ್ಞರಾದ ಡಾ|ಕೃಷ್ಣಪ್ರಸಾದ ಪಿ.ಆರ್ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರಥಮ ಸ್ಥಾನಿಯಾದ ಬೆಂಗಳೂರು ತಂಡದ ಕ್ಯಾಪ್ಟನ್ ಹಾಗೂ ದ್ವಿತೀಯ ಸ್ಥಾನ ಪಡೆದ ಉಡುಪಿ ತಂಡದ ಕ್ಯಾಪ್ಟನ್‌ಗಳವರು ಶ್ರೀ ಪಿ.ನಾಗರಾಜ್ ರವರಿಂದ ಬಹುಮಾನ ಸ್ವೀಕರಿಸಿದರು. ಉಡುಪಿ ತಂಡದ ಅಭಿಲಾಷ್ ಉತ್ತಮ ಬೌಲರ್ ಆಗಿಯೂ, ಬೆಂಗಳೂರು ತಂಡದ ಪ್ರದೀಪ್‌ರವರು ಉತ್ತಮ ದಾಂಡಿಗರಾಗಿಯೂ, ಬೆಂಗಳೂರು ತಂಡದ ಕಿರಣ್‌ರವರು ಉತ್ತಮ ಆಲ್ ರೌಂಡರ್ ಆಗಿಯೂ ಮೂಡಿ ಬಂದರು. ಡಾ|ಕೃಷ್ಣಪ್ರಸಾದ್ ರವರು ಇವರಿಗೆ ಬಹುಮಾನ ವಿತರಿಸಿದರು. ಜನಗಣಮನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಮಹಾಶಿವರಾತ್ರಿಯ ಆಮಂತ್ರಣ



ಭಕ್ತಾಭಿಮಾನಿಗಳೇ,

ತಾ.24-02-2017, ಶುಕ್ರವಾರ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘುಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

-ಆಡಳಿತ ಮಂಡಳಿ

ವಿ.ಸೂ. : ಉಡುಪಿ, ಪಡುಬಿದ್ರಿ, ಹಾಗೂ ಬ್ರಹ್ಮಾವರದ ಮಹಿಳಾ ವೇದಿಕೆಯ ಸದಸ್ಯರಿಂದ ವಿಶೇಷವಾದ ಶಿವಭಕ್ತಿ ಗೀತೆಗಳ ಗಾಯನ ಹಾಗೂ ಭಜನಾ ಕಾರ್ಯಕ್ರಮ ಬೆಳಗ್ಗೆ 9-00 ಗಂಟೆಯಿಂದ 12-00ರ ತನಕ ನೆರವೇರಲಿದೆ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯ ಕರೆಯೋಲೆ



ಪ್ರಿಯರೇ,

ಸ್ವಸ್ತಿ! ಶ್ರೀ ದುರ್ಮುಖ ನಾಮ ಸಂ।ರದ ಮೀನ ಸಂಕ್ರಮಣ ತಾ.14-03-2017ನೇ ಮಂಗಳವಾರ

**ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯು**

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

-ಆಡಳಿತ ಮಂಡಳಿ

ಕಾರ್ಯಕ್ರಮ : ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಹಿಳಾ ವೇದಿಕೆಯಿಂದ ಭಜನಾ ಕಾರ್ಯಕ್ರಮ, ಪಾರಾಯಣ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ ಮತ್ತು ಅನ್ನಸಂತರ್ಪಣೆ

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

**(ಅಂತರ್ಜಾತೀಯ ವಿವಾಹದ ಬಗ್ಗೆ ಚರ್ಚೆಯ ಮುಂದುವರಿದ ಭಾಗ)**

ಕಳೆದ ತಿಂಗಳಲ್ಲಿ ಅಂತರ್ಜಾತೀಯ ವಿವಾಹಗಳಿಂದ ನಮ್ಮ ಸಮಾಜಕ್ಕೆ ಹಾಗೂ ಸ್ವತಃ ಆ ವ್ಯಕ್ತಿಗೆ ಆಗುವ ಬಾಧಕಗಳ ಬಗ್ಗೆ ಚರ್ಚಿಸಿದ್ದೆ. ಆದರೆ ಅಂತರ್ಜಾತೀಯ ವಿವಾಹಗಳನ್ನು ನಮ್ಮ ಮೇಲೆ ಯಾರೂ ಹೇರಿದ್ದಲ್ಲ, ಅದು ನಿಧಾನವಾಗಿ ಅನೇಕ ವರ್ಷಗಳಿಂದ ನಮ್ಮ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಪೂರಕವಾಗಿ ಬೆಳೆದು ಬಂದ ಪ್ರಕ್ರಿಯೆ (ಡಾರ್ವಿನ್‌ನ ಸಿದ್ಧಾಂತದಂತೆ). ಈಗ ಜನಪ್ರಿಯವೂ ಆಗುತ್ತಿರುವುದರಿಂದ ಅದಕ್ಕೇನೋ ಸಾಧಕಗಳೂ ಇರಬೇಕಲ್ಲವೇ? ಆದುದರಿಂದ ಅಂತರ್ಜಾತೀಯ ವಿವಾಹಗಳಲ್ಲಿರುವ ಒಳ್ಳೆಯ ಗುಣಗಳೇನು ಎಂಬುದನ್ನು ಪರಿಶೀಲಿಸೋಣ.

ಮದುವೆಯಾಗುವುದೆಂದರೆ ಅನುರೂಪ ಸಂಗಾತಿಯನ್ನು ಹುಡುಕುವುದಲ್ಲವೇ? ಹೆತ್ತವರ ಅನುರೂಪ ಸಂಗಾತಿಯನ್ನು ಹುಡುಕುವ ಹುಡುಕಾಟವು “ಮುಂಡಾಸುದಾಯೆ ಬರಯೆ, ಮುಟ್ಟಾಳೆದಾಯೆಗ್ ಕೊಳಯೆ” ಎಂಬ ಗಾದೆಯ ಮಾತಿನಷ್ಟು ಹಳೆಯದು. “ಅನುರೂಪ” ಎಂದರೆ ಸೌಂದರ್ಯ, ವಿದ್ಯೆ, ಹುದ್ದೆ, ಸಂಬಳ, ಭತ್ಯೆ ಮಾತ್ರವಲ್ಲದೆ ಅವನು/ಳು ವಾಸವಾಗಿರುವ ಪ್ರದೇಶಗಳೆಲ್ಲದರಲ್ಲೂ ಸರಿಸಮಾನ/ಒಪ್ಪಬಹುದಾದ ಸಂಗಾತಿ ಎಂದರ್ಥ. ಸೌಂದರ್ಯ ವಿದ್ಯೆ ಹುದ್ದೆಗಳೇನೋ ಸರಿ, ಆದರೆ ವಾಸವಾಗಿರುವ ಪ್ರದೇಶವೆಂದರೆ ಹಳ್ಳಿಯೋ ಅಥವಾ ಪೇಟೆಯೋ ಎಂಬುದು ಮಾತ್ರವಲ್ಲ, ಬೆಂಗಳೂರಿನಂತಹಾ ಪಟ್ಟಣವೋ, ಗಲ್ಫ್ ದೇಶಗಳೋ, ಅಮೇರಿಕಾವೋ, ಇಂಗ್ಲಂಡೊ ಎಂಬ ವಿಷಯಗಳೂ ಅನುರೂಪ ಎಂಬ ಪದದ ವಿವರಣೆಯ ವ್ಯಾಪ್ತಿಯೊಳಗೆ ಬರುತ್ತಿವೆ. ಆದುದರಿಂದ ನಮ್ಮಂತಹಾ ಸಣ್ಣ ಸಮಾಜದೊಳಗೆ ಅನುರೂಪ ಸಂಗಾತಿಯ ಆಯ್ಕೆ ನಡೆಯುವಾಗ ಅಲ್ಲಿ ಆಯ್ಕೆಗೆ ಅವಕಾಶ ಕಡಿಮೆ ಇರುವುದು ಸಹಜ. ಅದೇ ಅಂತರ್ಜಾತೀಯ ವಿವಾಹವಾಗುವುದಾದರೆ ಅನುರೂಪ ಸಂಗಾತಿಯ ಆಯ್ಕೆಗೆ ಅವಕಾಶಗಳು ವಿಪುಲವಾಗಿರುತ್ತದಲ್ಲವೇ?

ಎರಡನೆಯದಾಗಿ ಈಗ ನಮ್ಮ ಸಮಾಜಬಾಂಧವರು ದೂರದೂರಿನಲ್ಲಿ ನೆಲೆಸಿದ್ದಾರೆ. ಹಾಗಾಗಿ ಪರಸ್ಪರ ಪರಿಚಯ ಸಂವಹನೆ ಕಡಿಮೆಯಾಗಿದೆ. ಸಮಾಜ ಬಾಂಧವರೊಡನೆ ಬೆರೆಯದೇ ಇರುವವರೂ ಅನೇಕ ಮಂದಿ ಇದ್ದಾರೆ. ತಂದೆ ತಾಯಂದಿರ ವಿಷಯವೇ ಹೀಗಿರುವಾಗ ನಮ್ಮ ಸಮಾಜದ ಯುವಕ ಯುವತಿಯರಿಗಂತೂ ಪರಸ್ಪರ ಪರಿಚಯವೇ ಇಲ್ಲವೆಂದರೆ ತಪ್ಪಾಗದು. ಒಳ್ಳೆಯ ವಿದ್ಯೆ ಹಾಗೂ ಹುದ್ದೆ ಪಡೆದು ಪಕ್ವವಾಗಿರುವ ಇಂದಿನ ಯುವಜನಾಂಗದವರು ತಂದೆ ತಾಯಂದಿರು ತಮಗೆ ಸಂಗಾತಿ ಹುಡುಕಿಕೊಡಲಿ ಎಂದು ಕಾಯದೇ ತಮ್ಮ ಪರಿಚಯದ ವರ್ತುಲದೊಳಗೆ (ಕಾಲೇಜಿನ, ವೃತ್ತಿಯ ಇತ್ಯಾದಿ) ಅನುರೂಪನಾದ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು ಈಗಿನ ಕಾಲಕ್ಕೆ ಸಹಜವಾದ ಬೆಳವಣಿಗೆಯಾಗಿದೆ ಹಾಗೂ ಅವರ ಪರಿಚಯದ ವರ್ತುಲದಲ್ಲಿ ಅನುರೂಪ ಸಂಗಾತಿ ದೊರಕುವುದು ಸುಲಭವೂ ಹೌದು. ಆದರೆ ಅವರ ಪರಿಚಯದ ವರ್ತುಲದಲ್ಲಿ ನಮ್ಮ ಸಮಾಜದ ವಿವಾಹಯೋಗ್ಯ ಯುವಕ/ಯುವತಿಯರು ಇಲ್ಲದಿದ್ದಲ್ಲಿ ಸ್ವಾಭಾವಿಕವಾಗಿಯೇ ಅವರ ಆಯ್ಕೆ ಅಂತರ್ಜಾತೀಯವಾಗಿರುತ್ತದಲ್ಲವೇ?

ಮೂರನೆಯದಾಗಿ ಪ್ರತಿಯೊಬ್ಬರೂ ತಾವು ವಿವಾಹವಾಗಲಿರುವವನ/ಳ ಸ್ವಭಾವದ ಬಗ್ಗೆ, ಚಟಗಳ ಬಗ್ಗೆ, ಆರೋಗ್ಯದ ಬಗ್ಗೆ, ವಿದ್ಯೆಯ, ವೃತ್ತಿಯ ಹಾಗೂ ಸಂಬಳದ ಬಗ್ಗೆ , ಅವನ/ಳ ಹೆತ್ತವರ ಹಾಗೂ ಓರಗೆಯವರ ಬಗ್ಗೆ ತಿಳಿಯಲು ಅಪೇಕ್ಷಿಸುತ್ತಾರೆ. ಆದರೆ ನೇರವಾಗಿ ಕೇಳಲು ದಾಕ್ಷಿಣ್ಯ ಅಡ್ಡಬರುತ್ತದೆ.ಈಗ ಅಂತರ್ಜಾಲದಲ್ಲಿ ಲಭ್ಯವಿರುವ ವೈವಾಹಿಕ ಅಂಕಣಗಳು ಈ ಖಾಸಗಿ ಮಾಹಿತಿಯನ್ನು ಕೂಡಾ ನೇರವಾಗಿ ಒದಗಿಸುವುದರಿಂದ (ಮಾಹಿತಿಯ ಸಾಚಾತನದ ಬಗ್ಗೆ ಖಾತ್ರಿ ಇಲ್ಲದಿದ್ದರೂ), ಈ ಕಾರಣಕ್ಕಾಗಿ ವೈವಾಹಿಕ ಅಂಕಣಗಳನ್ನು ಅವಲಂಬಿಸುವವರ ಸಂಖ್ಯೆ ಗಣನೀಯವಾಗಿದೆ. ಇದೂ ಕೂಡಾ ಅಂತರ್ಜಾತೀಯ ವಿವಾಹಕ್ಕೆ ಪೂರಕವಾಗಿದೆ.

ಕೊನೆಯದಾಗಿ ವರದಕ್ಷಿಣೆಯ ಪದ್ಧತಿ (ನಮ್ಮಲ್ಲಿ ಅತ್ಯಂತ ಕಡಿಮೆ ಇರುವುದಾಗಿದ್ದರೂ) ಅಂತರ್ಜಾತೀಯ ವಿವಾಹದಿಂದಾಗಿ ಸಂಪೂರ್ಣವಾಗಿ ನಿರ್ಮೂಲನವಾಗುತ್ತದೆ. ವಿವಾಹ ಸಂಬಂಧೀ ಖರ್ಚುಗಳೂ ಕಡಮೆಯಾಗಬಹುದು.

ಇವಿಷ್ಟು ಅಂತರ್ಜಾತೀಯ ವಿವಾಹದ ಧನಾತ್ಮಕ ಅಂಶಗಳು. ಹೀಗೆ ನಾನಾ ಕಾರಣಗಳಿಂದಾಗಿ ಅಂತರ್ಜಾತೀಯ ವಿವಾಹಗಳು ಜನಪ್ರಿಯವಾಗುತ್ತಿವೆ. ಈ ಕಾರಣಗಳೇನೆಂದರೆ

1) ಅನುರೂಪ ಸಂಗಾತಿಯ ಆಯ್ಕೆಗೆ ವಿಪುಲ ಅವಕಾಶ

2) ವಿವಾಹಕ್ಕೆ ಮುಂಚಿತವಾಗಿ ಸಂಗಾತಿ ಬಗ್ಗೆ ತಿಳಿದಿರುವ ಧನಾತ್ಮಕ ಅಂಶ

3) ಸ್ವತಃ ಸಂಗಾತಿಯನ್ನು ಆಯುವ ಅವಕಾಶ

4) ಪ್ರೇಮವಿವಾಹಕ್ಕೆ ಅವಕಾಶ–ಯುವಕ ಯುವತಿಯರು ಪ್ರಾಯಪ್ರಬುದ್ಧರಾಗುತ್ತಿದ್ದಂತೆ ತಮಗೊಬ್ಬ ಗೆಳೆಯ/ಗೆಳತಿ/ಸಂಗಾತಿ ಬೇಕೆಂದು ಬಯಸುವುದು ಪ್ರಕೃತಿ ಸಹಜವಾದ ನಡವಳಿಕೆಯಾಗಿದೆ. ನಾಗರೀಕತೆಯ ಚೌಕಟ್ಟಿನೊಳಗೆ ಈ ಕಾಮನೆಗಳನ್ನು ಅದುಮಿಡಲಾಗಿಯಷ್ಟೇ ವಿನಃ ಇಂತಹಾ ಭಾವನೆಗಳು ಯುವಕಯುವತಿಯರ ಮನಸ್ಸಿನಲ್ಲಿ ಮೂಡುವುದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ಸಮಾಜದ ಕಟ್ಟುಪಾಡುಗಳು ಸಡಿಲವಾದಂತೆ ಈ ಭಾವನೆಗಳು ಕೃತಿಗಿಳಿಯಲು ಸುಲಭವಾಗುತ್ತಿದೆ. ಅಂತರ್ಜಾತೀಯ ವಿವಾಹಕ್ಕೆ ಹೆತ್ತವರಿಂದ/ಸಮಾಜದಿಂದ ಸಮ್ಮತಿ ಸಿಕ್ಕರೆ ಯುವಕ/ಯುವತಿಯರು ಪ್ರೇಮವಿವಾಹವಾಗಲು ಅವಕಾಶ ದೊರಕುತ್ತದೆ.

5) ಮಕ್ಕಳು ತಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಹೆತ್ತವರ ಸಂಗಾತಿ ಹುಡುಕಿ ಕೊಡುವ ಕಷ್ಟ/ಜವಾಬ್ದಾರಿ ಕಡಿಮೆಯಾಗುವುದು.

ಹೀಗೆ ಎರಡಲುಗಿನ ಕತ್ತಿಯಂತಿರುವ ಈ ಸಮಸ್ಯೆ(?)ಯನ್ನು ಹೇಗೆ ಪರಿಹರಿಸಬಹುದೆಂಬುದನ್ನು ಮುಂದಿನ ಸಂಚಿಕೆಯಲ್ಲಿ ಚರ್ಚಿಸೋಣ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
-ಸಂಪಾದಕ ಮಂಡಳಿ

**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-18**

## ಮುಂಡ್ಕೂರು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಕಾರ್ಕಳ ತಾಲೂಕು





ಕಾರ್ಕಳ ತಾಲೂಕಿನ ಬೆಳ್ಮಣ್ಣು (ಪಡುಬಿದ್ರೆಯಿಂದ ಬೆಳ್ಮಣ್ಣಿಗೆ ನೇರವಾದ ರಸ್ತೆಯಿದೆ)ನಿಂದ ಮುಂಡ್ಕೂರಿಗೆ ಹೋಗುವ ರಸ್ತೆಯಲ್ಲಿ ಸುಮಾರು ಎರಡು ಕಿ.ಮಿ ಕ್ರಮಿಸಿದಾಗ ಗರಡಿ ಎಂಬ ಸ್ಥಳದಲ್ಲಿ ಹಾಕಿರುವ ಸೂಚನಾಫಲಕದ ಬಳಿ ಎಡಬದಿಗೆ ತಿರುಗಿ 1.7 ಕಿ.ಮಿ ಸಾಗಿದರೆ ಮುಲ್ಲಡ್ಕ, ಕೋರಿಕೆಬೆಟ್ಟು ಎಂದು ಕರೆಯುವ ಮಲೆನಾಡಿನ ಸೆರಗಿನಲ್ಲಿರುವ ರಮಣೀಯ ಪ್ರದೇಶದಲ್ಲಿ ಸಾಲುಗದ್ದೆಗಳ ನಡುವೆ ಈ ದೇವಸ್ಥಾನವಿದೆ. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಪ್ರಥಮ ಅನ್ನಪೂರ್ಣೇಶ್ವರಿ ದೇವಸ್ಥಾನವಿದು.

ದಿ। ಬಪ್ಪನಾಡು ಅನಂತಯ್ಯ ಶ್ಯಾನುಭಾಗರ ಪತ್ನಿ ದಿ। ಭಾಗೀರಥಿಯವರ ಮಾತಾಪಿತೃಗಳಿಗೆ ಸೇರಿದ ಜಾಗವಿದು.ಈ ಮನೆಯನ್ನು ಮಂತ್ರಿಗಳ ಮನೆ ಎಂದು ಕರೆಯುತ್ತಿದ್ದರು. ಈ ಮನೆಯ ಯಜಮಾನ ಮೂಡುಬಿದರೆಯ ಬಲ್ಲಾಳರಿಗೆ ಮಂತ್ರಿಗಳಾಗಿದ್ದರಂತೆ.ಕಾಲಕ್ರಮದಲ್ಲಿ ಈ ಮನೆ ಹಾಗೂ ಮನೆಗೆ ಹೊಂದಿಕೊಂಡಿದ್ದ ದೇವಸ್ಥಾನ ಪಾಳುಬಿತ್ತು. ಈ ಮನೆ ಹಾಗೂ ದೇವಸ್ಥಾನವಿದ್ದ ಜಾಗವನ್ನು ಶ್ರೀ ಅನಂತಯ್ಯ ಶ್ಯಾನುಭಾಗರು ಕ್ರಯಕ್ಕೆ ಪಡೆದುಕೊಂಡರು.ಅವರ ಮಗನಾದ ಶ್ರೀ ಬಪ್ಪನಾಡು ಗೋವಿಂದರಾಯರು ಉದ್ಯೋಗ ನಿಮಿತ್ತ ಹಲವಾರು ಊರುಗಳಲ್ಲಿ ಶಿಕ್ಷಕರಾಗಿ ಇದ್ದವರು ನಿವೃತ್ತಿಯ ನಂತರ ಈ ಸ್ಥಳದಲ್ಲಿ ನೆಲೆಸಲು ನಿಶ್ಚಯಿಸಿದಾಗ ಕಾಡಿನ ಮಧ್ಯೆ ಪಾಳುಬಿದ್ದಿದ್ದ ಈ ದೇವಸ್ಥಾನವನ್ನೂ ಪುನರ್ನಿರ್ಮಿಸಲು ಸಂಕಲ್ಪಿಸಿದರು. ಜೀರ್ಣೋದ್ಧಾರದ ಸಮಯದಲ್ಲಿ ಪಾಣಿಪೀಠ, ಬಲಿಕಲ್ಲು ಆನೆಕಲ್ಲಿನ ಜೊತೆಗೆ ಭಗ್ನವಾಗಿದ್ದ ಮೂರ್ತಿಯೂ ಸಿಕ್ಕಿತು. ಇತಿಹಾಸ ತಜ್ಞರಾದ ಪಾದೂರು ಗುರುರಾಜ ಭಟ್ಟರು ಈ ಮೂರ್ತಿಯನ್ನು ವಿಷ್ಣುಮೂರ್ತಿ ಎಂದು ಗುರುತಿಸಿದರು. ಅಷ್ಟಮಂಗಲ ಪ್ರಶ್ನೆಯಲ್ಲಿ ಇದು ಮೂಲತಃ ದೇವಿಯ ದೇವಸ್ಥಾನ, ವಿಜಯನಗರದ ಕಾಲದ್ದು, ಆದುದರಿಂದ ದೇವಿಯ ಸಾತ್ವಿಕ ರೂಪವಾದ ಶ್ರೀ ಅನ್ನಪೂರ್ಣೇಶ್ವರಿಯ ಪ್ರತಿಷ್ಠಾಪನೆ ಮಾಡುವಂತೆ ಸಲಹೆ ಬಂದಿತು. ಅದರಂತೆ ಶ್ರೀ ಗೋವಿಂದರಾಯರು ದ್ವಿವೇದಿ ಸೀತಾರಾಮ ಶಾಸ್ತ್ರಿಗಳ ನೇತೃತ್ವದಲ್ಲಿ 29-05-1975ರಲ್ಲಿ ಶ್ರೀ ಅನ್ನಪೂರ್ಣೇಶ್ವರಿಯನ್ನು ಪ್ರತಿಷ್ಟಾಪಿಸಿದರು. ಅಷ್ಟಮಂಗಲ ಮಾತ್ರವಲ್ಲದೇ ಇಲ್ಲಿಗೆ 2 ಕಿ.ಮಿ ದೂರದಲ್ಲಿರುವ ಮಹಾಲಿಂಗೇಶ್ವರ ದೇವಾಲಯದ ಬಾಗಿಲಿನಲ್ಲೂ ಅನ್ನಪೂರ್ಣೆ ಕ್ಷೇತ್ರ ಎಂದು ಬರೆದಿರುವುದು ಈ ಕ್ಷೇತ್ರ ಪ್ರಾಚೀನಕಾಲದಿಂದಲೂ ಅನ್ನಪೂರ್ಣೆಯ ಕ್ಷೇತ್ರವಾಗಿತ್ತೆಂಬುದಕ್ಕೆ ಉದಾಹರಣೆಯಾಗಿದೆ.

ಅಂದಿನಿಂದ ಈ ದೇವಸ್ಥಾನವು ಭಕ್ತರ ಅಭೀಷ್ಟದಂತೆ ಶ್ರೀದೇವಿಯ ಅನುಗ್ರಹದೊಂದಿಗೆ ಅಭಿವೃದ್ಧಿಯನ್ನು ಹೊಂದುತ್ತಾ ಬಂದಿತು. ಗರ್ಭಗುಡಿಯ ಮುಂದೆ ತೀರ್ಥಮಂಟಪ, ಹೊರ ಆವರಣವನ್ನು ಕಟ್ಟಲಾಯಿತು. ಅರ್ಚಕರ ನಿವಾಸ, ಸಭಾಂಗಣವನ್ನೂ ವ್ಯವಸ್ಥೆ ಮಾಡಲಾಯಿತು 1995ರಲ್ಲಿ ವಿಷ್ಣುಮೂರ್ತಿಯನ್ನೂ ಸಾಲಿಗ್ರಾಮರೂಪದಲ್ಲಿ ಪೂಜಿಸಲು ಆರಂಭಿಸಲಾಯಿತು. ಈ ಕ್ಷೇತ್ರದಲ್ಲಿ ನಾಗದೇವರ, ರಕ್ತೇಶ್ವರಿ, ನಂದಿಗೋಣನ ಸನ್ನಿಧಿಯೂ ಇದೆ. 2002ನೇ ಇಸವಿಯಲ್ಲಿ ಬ್ರಹ್ಮಕಲಶೋತ್ಸವವನ್ನು ನೆರವೇರಿಸಲಾಯಿತು.

ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಈ ಕ್ಷೇತ್ರದ ತಂತ್ರಿಗಳು. ಪ್ರತೀ ತಿಂಗಳ ಹುಣ್ಣಿಮೆಯಂದು ಗಣಹೋಮ ಹಾಗೂ ಸತ್ಯನಾರಾಯಣ ಪೂಜೆ ನೆರವೇರುತ್ತದೆ. ಸಪ್ತಪೂಜೆ, ಸರ್ವಪೂಜೆ, ಹೂವಿನಪೂಜೆ, ನವರಾತ್ರಿಯ ಒಂಬತ್ತು ದಿನಗಳಲ್ಲಿ ಆರಾಧನೆ, ಮಾಘಶುದ್ಧ ನವಮಿಯಂದು ವಾರ್ಷಿಕೋತ್ಸವ, ರಂಗಪೂಜೆ ಇಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು. ಬಡವಿದ್ಯಾರ್ಥಿಗಳಿಗೆ ಧನಸಹಾಯವನ್ನೂ ಕ್ಷೇತ್ರದ ವತಿಯಿಂದ ನೀಡಲಾಗುತ್ತದೆ. ವಿಕಾಸಕವಿ ಎಂದೇ ಖ್ಯಾತರಾದ ಬೆಂಗಳೂರಿನ ಶ್ರೀ ಬಿ.ವಿ.ರಾವ್ ಇವರು ಈ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿದ್ದಾರೆ. ಅವರು ವಿಶೇಷ ಆಸಕ್ತಿವಹಿಸಿ ಶ್ರೀ ದೇವಿಯ ಮೇಲೆ ರಚಿತವಾದ ಭಕ್ತಿಗೀತೆಗಳು ಹಾಗೂ ಭರತನಾಟ್ಯಗಳ ಸೀಡಿಯನ್ನು ಬಿಡುಗಡೆಗೊಳಿಸಿದ್ದಾರೆ. ಶ್ರೀಕ್ಷೇತ್ರದ ಬಗ್ಗೆ ದೃಷ್ಯರೂಪಕವು ಯುಟ್ಯೂಬ್‌ನಲ್ಲಿ ಲಭ್ಯವಿದೆ. ಈ ಕ್ಷೇತ್ರದಲ್ಲಿ ಅಪರಕ್ರಿಯಾದಿ ಕರ್ಮಗಳನ್ನು ನೆರವೇರಿಸಲೂ ವಾಸ್ತವ್ಯ ಸಹಿತ ಸಕಲ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ಬಿ.ವಿ.ರಾಯರನ್ನು 9880201725ರಲ್ಲಿ ಸಂಪರ್ಕಿಸಬಹುದು.

**ಶ್ರೀಶಾರದಾ ಪತ್ರಿಕೆಯ ಓದುಗರಿಗೆ ಮಹಾಶಿರಾತ್ರಿಯ ಶುಭಾಶಯಗಳು**

Power Cut !!!???
Install Best Quality Inverters...
Mobile : 9483242111
K.Suresh Rao : 9036443884
Tel : 0820-2523436



DEEPA ENTERPRISES
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging



ಉದ್ಘಾಟಕ ವೈ. ಕುಮಾರ ಸ್ವಾಮಿ



ವೀಕ್ಷಕ ಬಳಗ



ಬಿರುಸಿನ ಪಂದ್ಯಾಟ



ಬಲೂನ್ ಹಾರಿಸಿ ಉದ್ಘಾಟನೆ



ದ್ವಿತೀಯ ಸ್ಥಾನಿ ಉಡುಪಿ ತಂಡ



ಮುಖ್ಯಅತಿಥಿ ಡಾ। ಕೃಷ್ಣಪ್ರಸಾದ್ ಹಾಗೂ ಸಂಘದ ಅಧ್ಯಕ್ಷ ವೈ. ಭುವನೇಂದ್ರ ರಾವ್



ಅತ್ಯುತ್ತಮ ದಾಂಡಿಗ - ಬೆಂಗಳೂರು ತಂಡದ ಪ್ರದೀಪ್ ರಾವ್



ಮುಖ್ಯಅತಿಥಿ ಐ.ಪಿ.ನಾಗರಾಜ್ ಹಾಗೂ ಸಂಘದ ಅಧ್ಯಕ್ಷ ವೈ. ಭುವನೇಂದ್ರ ರಾವ್



ಅತ್ಯುತ್ತಮ ಆಲ್‌ರೌಂಡರ್ - ಬೆಂಗಳೂರು ತಂಡದ ಕಿರಣ್



ಅತ್ಯುತ್ತಮ ಬೌಲರ್ - ಉಡುಪಿ ತಂಡದ ಅಭಿಲಾಷ್

## ಮಹಿಳಾವೇದಿಕೆಯಿಂದ ನಡೆದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರ ವಿವರ

ಶ್ರೀಶಾರದಾ ಮಂಟಪದಲ್ಲಿ 22-01-2017ರಂದು ಮಹಿಳಾ ವೇದಿಕೆಯ ವತಿಯಿಂದ ಮಕ್ಕಳು ಹಾಗೂ ಮಹಿಳೆಯರಿಗೆ ನಡೆದ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರ ವಿವರ ಹೀಗಿದೆ.

**3 ವರ್ಷದ ಒಳಗಿನ ಮಕ್ಕಳಿಗೆ (ಬಲೂನು ಹೆಕ್ಕಿ ತರುವುದು)** : ಪ್ರಥಮ : ಆಯುಷ್ ಕಟಪಾಡಿ, ದ್ವಿತೀಯ : ತನ್ವಿ ಕೆ.ಹೆಚ್. ಮೈರುಕೊಮ್ಮೆ

**3 ರಿಂದ 5 ವರ್ಷದ ಒಳಗಿನ ಮಕ್ಕಳಿಗೆ (1. ದಿಂಬು ಪಾಸ್ ಮಾಡುವುದು)** : ಪ್ರಥಮ : ಲಹರಿ ಕೆ. ರಾವ್ ಮಣಿಪಾಲ, ದ್ವಿತೀಯ : ಸಂಕರ್ಷಣ ನಿಟ್ಟೂರು. **(2. ಮಣಿಗಳನ್ನು ಬೇರ್ಪಡಿಸುವುದು)** : ಪ್ರಥಮ : ಅದಿತಿ ಕುಕ್ಕಿಕಟ್ಟೆ, ದ್ವಿತೀಯ : ಲಹರಿ ಕೆ.ರಾವ್ ಮಣಿಪಾಲ

**1ನೇ ತರಗತಿಯಿಂದ 3ನೇ ತರಗತಿಯವರೆಗಿನ ಮಕ್ಕಳಿಗೆ (1. ಲಿಂಬೆ ಹಣ್ಣಿನ ಓಟ)** : ಪ್ರಥಮ : ತನುಶ್ರೀ ಮಾರ್ಪಳ್ಳಿ, ದ್ವಿತೀಯ : ಸುಜೀಕ್ಷ ಕೆಮ್ಮಣ್ಣು ಮತ್ತು ಆರುಶಿ ಅಂಬಲಪಾಡಿ **(2. ಬಕೆಟಿಗೆ ಬಾಲ್ ಹಾಕುವುದು)** : ಪ್ರಥಮ : ತನುಶ್ರೀ ಮಾರ್ಪಳ್ಳಿ, ದ್ವಿತೀಯ : ಆರುಶಿ ಅಂಬಲಪಾಡಿ

**4ನೇ ತರಗತಿಯಿಂದ 6 ನೇ ತರಗತಿಯವರೆಗಿನ ಮಕ್ಕಳಿಗೆ (1. ಗ್ಲಾಸ್‌ಗಳಿಂದ ಪಿರಮಿಡ್ ಮಾಡುವುದು)** : ಪ್ರಥಮ : ಸುಜೇಶ ಕೆಮ್ಮಣ್ಣು, ದ್ವಿತೀಯ : ಸೌಮ್ಯ ಉಡುಪಿ **(2. ಬಲೂನ್ ಊದಿ ಒಡೆಯುವುದು)** : ಪ್ರಥಮ : ಸುಜೇಶ ಕೆಮ್ಮಣ್ಣು, ದ್ವಿತೀಯ : ಮಯೂರ್ ಉಡುಪಿ

**7ನೇ ತರಗತಿಯಿಂದ 9 ನೇ ತರಗತಿಯವರೆಗಿನ ಮಕ್ಕಳಿಗೆ (1. ಸೂಜಿಗೆ ನೂಲು ಹಾಕುವುದು)** : ಪ್ರಥಮ : ನವ್ಯಶ್ರೀ ಮಾರ್ಪಳ್ಳಿ, ದ್ವಿತೀಯ : ಅನನ್ಯ ಶಾಸ್ತ್ರಿ ಬನ್ನಂಜೆ **(2. ಸ್ಟ್ರಾಗಳನ್ನು ಜೋಡಿಸುವುದು)** : ಪ್ರಥಮ : ಅನನ್ಯ ಶಾಸ್ತ್ರಿ ಬನ್ನಂಜೆ, ದ್ವಿತೀಯ : ಶರಧಿ ಉಡುಪಿ.

**60 ವರ್ಷ ಮೇಲ್ಪಟ್ಟವರಿಗೆ (ಒಂದೇ ಬೆಂಕಿಕಡ್ಡಿಯಲ್ಲಿ ಮೇಣದ ಬತ್ತಿಗಳನ್ನು ಉರಿಸುವುದು)** : ಪ್ರಥಮ : ರಾಜೇಶ್ವರಿ ಹೇರೂರು ದ್ವಿತೀಯ : ಪದ್ಮ ಮಾರ್ಪಳ್ಳಿ

**70 ವರ್ಷ ಮೇಲ್ಪಟ್ಟವರಿಗೆ (ಗೋಲಿಗಳನ್ನು ಕಾಲಿನಲ್ಲಿ ಹೆಕ್ಕುವುದು)** : ಪ್ರಥಮ : ಶ್ರೀಮತಿ ತುಳಸಿ, ದ್ವಿತೀಯ : ಶ್ರೀಮತಿ ಇಂದಿರ

**ಹಿರಿಯ ನಾಗರಿಕರಿಗೆ (ಕೋಲಿಗೆ ರಿಂಗ್ ಹಾಕುವುದು)** : ಪ್ರಥಮ : ಶ್ರೀ ಸಿ.ಎಸ್.ರಾವ್, ದ್ವಿತೀಯ : ಶ್ರೀ ಭಾಸ್ಕರ ರಾವ್ ಮತ್ತು ಶ್ರೀ ಚಿದಂಬರ ಶ್ಯಾನುಭಾಗ್

**ಎಲ್ಲಾ ಮಹಿಳೆಯರಿಗೆ (Bombing the city)** : ಪ್ರಥಮ: ಶ್ರೀಮತಿ ವೈ. ಜಯಶ್ರೀ ಕೊರಂಗ್ರಪಾಡಿ, ದ್ವಿತೀಯ: ವಿಂಧ್ಯ ಬೈಲೂರು

## ಮೂಡುಬಿದಿರೆ ರಾಯೀ ರಾಜಕುಮಾರರಿಗೆ ಸಂಮಾನ



ಮೂಡುಬಿದಿರೆ ಬ್ರಾಹ್ಮಣ ಸಭಾ ಟ್ರಸ್ಟ್‌ನವರಿಂದ ದಶಂಬರ 11ರಂದು ನಡೆದ ವಿಪ್ರ ಸಮಾವೇಶದ ಸಂದರ್ಭದಲ್ಲಿ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿ ರಾಯೀ ರಾಜಕುಮಾರ್‌ರನ್ನು ಸಂಮಾನಿಸಿದರು. ಉಡುಪಿ ಸಂಸ್ಕೃತ ಕಾಲೇಜಿನ ಉಪನ್ಯಾಸಕ ಶ್ರೀ ಅಮೃತೇಶ ಆಚಾರ್ಯರವರು ಪ್ರಧಾನ ಉಪನ್ಯಾಸಕರಾಗಿದ್ದು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವೇದಿಕೆಯಲ್ಲಿ ಟ್ರಸ್ಟ್‌ನ ಅಧ್ಯಕ್ಷ ಶ್ರೀ ವಾದಿರಾಜ ಮಡ್ಮಣ್ಣಾಯ, ಗೌರವಾಧ್ಯಕ್ಷ ಪ್ರೊ| ಎಸ್.ಆರ್.ತೋಳ್ಪಾಡಿ, ಉಪಾಧ್ಯಕ್ಷ ಶ್ರೀ ಕೆ.ಆರ್.ಪಂಡಿತ್, ಕಾರ್ಯದರ್ಶಿ ಶ್ರೀ ಎಸ್.ಎನ್.ರಾವ್ ಉಪಸ್ಥಿತರಿದ್ದರು.

ರಾಯೀ ರಾಜಕುಮಾರರು ಅಧ್ಯಾಪಕರಾಗಿದ್ದು ಸುಮಾರು 600ಕ್ಕೂ ಮಿಕ್ಕಿ ಜನರಿಗೆ ಹಿಂದಿ ಪರೀಕ್ಷೆಗಳ ಮೂಲಕ ಮಾರ್ಗದರ್ಶಕರೂ, 100ಕ್ಕೂ ಹೆಚ್ಚು ಮಂದಿ ಸಾರ್ವಜನಿಕರನ್ನು ಸಾಕ್ಷರಗೊಳಿಸಿದ್ದರು, ಪತ್ರಕರ್ತರಾಗಿದ್ದು ಪತ್ರಕರ್ತರ ಸಂಘವನ್ನು, ಶಿಕ್ಷಕ ಸಂಘವನ್ನು ಮುನ್ನಡೆಸಿದ್ದರು. ಗ್ರಾಹಕ ಚಳುವಳಿಯಲ್ಲಿ ಸಕ್ರಿಯರಾಗಿದ್ದು, ಸಂಘಟನೆಯ ಒಕ್ಕೂಟದ ಜತೆ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ. ಅಂಚೆಚೀಟಿ, ನಾಣ್ಯ ಸಂಗ್ರಾಹಕರಾಗಿದ್ದು ಮೇಲ್ಕಂಡ ಎಲ್ಲಾ ವಿಷಯಗಳಲ್ಲಿ 300ಕ್ಕೂ ಹೆಚ್ಚು ಕಾರ್ಯಾಗಾರ, ಪ್ರದರ್ಶನಗಳನ್ನು ನಡೆಸಿದ್ದಾರೆ. ಪ್ರಸ್ತುತ ಹಿಂದಿ ಅಧ್ಯಾಪಕರ ಸಂಘದ ದ.ಕ.ಜಿಲ್ಲಾ ಅಧ್ಯಕ್ಷರಾಗಿ ಸರ್ವಾನುಮತಿಯಿಂದ ಆಯ್ಕೆಗೊಂಡ ಇವರು ರಾಜ್ಯದ ವಿವಿಧ ಪತ್ರಿಕೆಗಳಲ್ಲಿ ವೈವಿಧ್ಯಮಯ ಕವನ, ಲೇಖನ, ಅಂಕಣ, ವ್ಯಕ್ತಿ ಪರಿಚಯಗಳಿಂದ ಪ್ರಸಿದ್ಧ ಬರಹಗಾರರಾಗಿರುವುದನ್ನು ಸ್ಮರಿಸಿಕೊಳ್ಳಲಾಯಿತು.

## ದೇವಾನಂದ ಭಟ್ ಇವರಿಗೆ ಸನ್ಮಾನ




ಶತಮಾನ ಸಂಭ್ರಮದ ಲಯನ್ಸ್ ಸೇವಾ ಸಂಸ್ಥೆಯ ವತಿಯಿಂದ ಇತ್ತೀಚೆಗೆ ಮೂಡಬಿದಿರೆಯ ಎಂ.ಸಿ.ಎಸ್.ಬ್ಯಾಂಕ್ ಸಭಾಂಗಣದಲ್ಲಿ ತೋಡಾರು–ಮಿಜಾರು ಘಟಕದ 2016–17 ನೇ ಸಾಲಿನ ಪದಗ್ರಹಣದ ಸಂದರ್ಭದಲ್ಲಿ ಸಾಧಕ–ಸಂಘಟಕ–ಕಲಾವಿದ–ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿಯ ಕಾರ್ಯಾಧ್ಯಕ್ಷ ಮಿಜಾರು ದೇವಾನಂದ ಭಟ್ ಇವರನ್ನು ಸನ್ಮಾನಿಸಲಾಯಿತು, ಈ ವೇದಿಕೆಯಲ್ಲಿ ಲಯನ್ಸ್ ಜಿಲ್ಲಾ ಉಪರಾಜ್ಯಪಾಲರಾದ ಶ್ರೀ ದೇವದಾಸ ಭಂಡಾರಿ, ನಿಕಟಪೂರ್ವ ಅಧ್ಯಕ್ಷ ಶ್ರೀ ರಮೇಶ್ ಶೆಟ್ಟಿ ಮರಿಯಡ್ಕ, ಅಧ್ಯಕ್ಷ ಶ್ರೀ ಗಣೇಶ್ ಶೆಟ್ಟಿ, ನಿಕಟಪೂರ್ವ ಜಿಲ್ಲಾ ಗವರ್ನರ್ ಕವಿತಾ ಶಾಸ್ತ್ರಿ, ದೇವಾನಂದ ಭಟ್‌ರವರ ಶಾಲಾ ಗುರುಗಳು ಪ್ರಾಂತೀಯ ಅಧ್ಯಕ್ಷ ಶ್ರೀ ಪ್ರಮಥ್ ಕುಮಾರ್ ಹೀಗೆ ಅನೇಕ ಗಣ್ಯರು ಉಪಸ್ಥಿತರಿದ್ದರು.

## ಡಾ| ಬಿ.ಬಿ.ರಾಯರಿಗೆ ಪ್ರಶಸ್ತಿ ಪ್ರದಾನ



ಬೆಳ್ಮಣ್ ದೇವರಾಯರ ಪುತ್ರ ಡಾ| ಬಿ. ಬಾಲಕೃಷ್ಣ ರಾಯರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸಾಧನೆಗಾಗಿ ಕರ್ನಾಟಕ ಸರಕಾರವು ರಾಜ್ಯಸರಕಾರಿ ನೌಕರರಿಗೆ ಕೊಡಮಾಡುವ ಜಿಲ್ಲಾಮಟ್ಟದ ಸರ್ವೋತ್ತಮ ಸೇವಾಪ್ರಶಸ್ತಿಯನ್ನು ಗಣರಾಜ್ಯೋತ್ಸವದಂದು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್‌ರವರು ಉಡುಪಿ ಮಹಾತ್ಮಾಗಾಂಧಿ ಬಯಲು ರಂಗಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಗಣ್ಯರ ಸಮ್ಮುಖದಲ್ಲಿ ಪ್ರದಾನಿಸಿದರು. ಡಾ| ಬಾಲಕೃಷ್ಣ ರಾಯರು ಪಡುಬಿದ್ರಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಡಾ| ಎಚ್.ವಿ.ನವರಸಿಂಹಮೂರ್ತಿಯರಿಗೆ 'ಏರ್ಯ ಪ್ರಶಸ್ತಿ' ಪ್ರದಾನ



ಹಿರಿಯ ಸಾಹಿತಿ ಡಾ| ಏರ್ಯ ಲಕ್ಷ್ಮೀನಾರಾಯಣ ಆಳ್ವರು ತಮ್ಮ ಹೆಸರಿನಲ್ಲಿ ಸ್ಥಾಪಿಸಿರುವ 'ಏರ್ಯ ಪ್ರಶಸ್ತಿ'ಯನ್ನು ಈ ಬಾರಿ ಧಾರ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗಳನ್ನು ಮಾಡಿದ ವಿಶ್ರಾಂತ ಪ್ರಾಧ್ಯಾಪಕರೂ, ಹಿರಿಯ ಲೇಖಕರೂ ಆದ 'ಸಾಹಿತ್ಯಶ್ರೀ' ಪುರಸ್ಕೃತ ಡಾ| ಎಚ್.ವಿ.ನರಸಿಂಹಮೂರ್ತಿಯವರಿಗೆ ಪ್ರದಾನ ಮಾಡಲಾಯಿತು. ಮಂಗಳೂರು ಕೆನರಾ ಕಾಲೇಜಿನ ರತ್ನಾಬಾಯಿ ಸ್ಮಾರಕ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಕೆನರಾ ಹೈಸ್ಕೂಲ್ ಅಸೋಸಿಯೇಶನ್‌ನ ಸಂಚಾಲಕ ಶ್ರೀ ಮಾರೂರು ಸುಧೀರ್ ಪೈ ಅವರು ಪ್ರಶಸ್ತಿಯನ್ನು ನೀಡಿ ಗೌರವ ಸಂಭಾವನೆಯೊಂದಿಗೆ ಶುಭ ಹಾರೈಸಿದರು. ಶ್ರೀ ಎಸ್.ಎಸ್.ಕಾಮತ್ ಅಧ್ಯಕ್ಷತೆ ವಹಿಸಿದ್ದರು.

ಪ್ರಶಸ್ತಿ ಸ್ವೀಕರಿಸಿದ ಡಾ| ಎಚ್.ವಿ.ನರಸಿಂಹ ಮೂರ್ತಿಯವರು ಮಾತನಾಡಿ 'ಭಾರತಕ್ಕೆ ಜಗತ್ತಿನ ಎಲ್ಲೆಡೆ ಅಪಾರ ಗೌರವ ದೊರಕುತ್ತಿದೆ. ಸಹಸ್ರಾರು ವರ್ಷಗಳಷ್ಟು ಪ್ರಾಚೀನವಾದ ಸನಾತನ ಧರ್ಮದಿಂದ ಇದು ಸಾಧ್ಯವಾಗಿದೆ. 'ಸನಾತನ' ಎಂದರೆ ಭಗವಂತ ಎಂದರ್ಥ. ಸಾಕ್ಷಾತ್ ಭಗವಂತನೇ ಸ್ಥಾಪಿಸಿದ ಈ ಧರ್ಮಕ್ಕೆ ಹುಟ್ಟು–ಸಾವು ಎಂಬುದಿಲ್ಲ. ಪ್ರಾಚೀನ ಸಾಧು–ಸಂತರು, ಅವತಾರ ಪುರುಷರು ಸನಾತನ ಧರ್ಮವನ್ನು ಕಟ್ಟಿ ಬೆಳೆಸಿದ್ದಾರೆ. ವೇದಶಾಸ್ತ್ರ, ಇತಿಹಾಸ–ಪುರಾಣಗಳೆಲ್ಲ ನಮ್ಮ ಸನಾತನ ಧರ್ಮದ ಶ್ರೇಷ್ಠ ಗ್ರಂಥಗಳಾಗಿವೆ' ಎಂದು ಹೇಳಿ ಪ್ರತಿಷ್ಠಿತವಾದ ಈ ' ಏರ್ಯ ಪ್ರಶಸ್ತಿ'ಯನ್ನು ವಿನಯಪೂರ್ವಕ ಸ್ವೀಕರಿಸಿ, ಇದರ ಸ್ಥಾಪಕರಿಗೆ ಮತ್ತು ಸಂಬಂಧಿಸಿದ ಎಲ್ಲ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರೆ.

ಹಿರಿಯ ಸಾಹಿತಿ ಡಾ| ಏರ್ಯ ಲಕ್ಷ್ಮೀನಾರಾಯಣ ಆಳ್ವರು ಮಾತನಾಡಿ, 'ನಮ್ಮ ಸಮಾಜದಲ್ಲಿ ಧಾರ್ಮಿಕ ಕ್ಷೇತ್ರಕ್ಕೆ ಪ್ರಶಸ್ತಿಗಳೇ ಇಲ್ಲವಾಗಿವೆ. ಈ ಹಿನ್ನೆಲೆಯಲ್ಲಿ ನಾನು ಕಲಿತ ಕೆನರಾ ಕಾಲೇಜಿಗೆ ಈ ಹಿಂದೆ ನನಗೆ ಬಂದ ಪ್ರಶಸ್ತಿಯ ಮೊತ್ತವನ್ನು ನೀಡಿ, ಧಾರ್ಮಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡಲು ನಿರ್ಧರಿಸಿದೆ. ಧಾರ್ಮಿಕ ಕ್ಷೇತ್ರದಲ್ಲಿ ನಿರಂತರ ದುಡಿಯುತ್ತಾ, ಎಪ್ಪತ್ತೈದಕ್ಕೂ ಹೆಚ್ಚಿ ಧಾರ್ಮಿಕ ಗ್ರಂಥಗಳನ್ನು ಬರೆದ, ಚಿಕ್ಕಮಗಳೂರು ಜಿಲ್ಲೆಯ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಗೌರವಿಸಲ್ಪಟ್ಟ ಡಾ| ನರಸಿಂಹಮೂರ್ತಿಯವರು ಈ ಬಾರಿ ಪ್ರಶಸ್ತಿಗೆ ಅರ್ಹರಾಗಿರುವುದು ನಮಗೆಲ್ಲ ಸಂತಸ ತಂದಿದೆ' ಎಂದು ಹೇಳಿದರು. ಶ್ರೀ ಗೋಕರ್ಣನಾಥ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಡಾ| ಆರ್.ನರಸಿಂಹಮೂರ್ತಿ ಅಭಿನಂದನ ಭಾಷಣ ಮಾಡಿದರು.

ಕೆನರಾ ಕಾಲೇಜಿನ ಪ್ರಾಂಶುಪಾಲರಾದ ಡಾ| ಕೆ.ವಿ.ಮಾಲಿನಿ ಸ್ವಾಗತಿಸಿದರು. ಡಾ| ಶಾಂತಲಾ ವಿಶ್ವಾಸ್ ಅಭಿನಂದನ ಪತ್ರ ವಾಚಿಸಿದರು. ಪ್ರೊ| ಯು.ಎಸ್.ವಾಣಿ ಪ್ರಶಸ್ತಿ ಹಿನ್ನೆಲೆ ಕುರಿತು ವಿವರಿಸಿದರು. ಡಾ| ಮನೋಹರ ಜೋಶಿ ವಂದಿಸಿದರು. ಕೆ.ರೇಖಾದೇವಿ ನಿರೂಪಿಸಿದರು.

## ಆರೂರು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶ್ರೀ ಮ.ನಾ.ಹೆಬ್ಬಾರರಿಂದ ಹರಿಕಥೆ



ಉಡುಪಿ ತಾಲೂಕು ಆರೂರು ಮಹತೋಭಾರ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆದ ಏಕೋತ್ತರ ಸಹಸ್ರ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ದಿನಾಂಕ 31–01–2017ರಂದು ಪೂರ್ವಾಹ್ನ ಶ್ರೀ ಹರಿದಾಸ ಮ.ನಾ.ಹೆಬ್ಬಾರ ಇವರಿಂದ 'ಭಕ್ತ ಪ್ರಹ್ಲಾದ' ಎಂಬ ಕಥಾಭಾಗದ ಹರಿಕಥಾ ಕಾರ್ಯಕ್ರಮವು ಜರಗಿತು. ಪಕ್ಕವಾದ್ಯ ಹಾರ್ಮೋನಿಯಂನಲ್ಲಿ ನಿವೃತ್ತ ಉಪನ್ಯಾಸಕ ಶ್ರೀ ಕೆ.ಶ್ರೀನಿವಾಸ ರಾಯರು ಮತ್ತು ಮೃದಂಗದಲ್ಲಿ ಶ್ರೀ ಕೂಡ್ಲಿ ದೇವದಾಸ್ ಇವರುಗಳು ಸಹಕರಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ದೇವಳದ ಆಡಳಿತ ಮೊಕ್ತೇಸರರಾದ ಡಾ| ಎಂ.ಪಿ.ರಾಘವೇಂದ್ರ ರಾಯರು ಧನ್ಯವಾದಗಳನ್ನಿತ್ತು, ಹರಿಕಥಾ ಬಳಗದವರಿಗೆ ಶಾಲು, ಸಂಭಾವನೆಗಳನ್ನಿತ್ತು ಸತ್ಕರಿಸಿದರು.

## ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್‌ರವರಿಗೆ ಸನ್ಮಾನ



ದಿನಾಂಕ 24–12–2016ರಂದು ಸರಕಾರಿ (ಫಿಶರೀಸ್) ಹಿರಿಯ ಪ್ರಾಥಮಿಕ ಶಾಲೆ, ಕುಳಾಯಿಯಲ್ಲಿ ವಿಜೃಂಭಣೆಯಿಂದ ನಡೆದ ಸುವರ್ಣ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್ ಇವರ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಇಲಾಖಾ ಅಧಿಕಾರಿಗಳು, ಸುವರ್ಣ ಮಹೋತ್ಸವ ಸಮಿತಿಯ ಪದಾಧಿಕಾರಿಗಳು, ಮುಖ್ಯ ಶಿಕ್ಷಕರು, ಸ್ಥಳೀಯ ಕಾರ್ಪೋರೇಟರ್‌ಗಳು ಗೌರವಾದರಗಳಿಂದ ಸನ್ಮಾನಿಸಿ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಇವರು ತಾನು ಇದೇ ಶಾಲೆಯಲ್ಲಿ ನಿವೃತ್ತಿಯಾದ ಸವಿನೆನಪಿಗೆ ಸುವರ್ಣ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮಕ್ಕೆ ಶಾಲೆಗೆ ರೂ.25,000 ದೇಣಿಗೆ ನೀಡಿ ಸಹಕರಿಸಿದರು. ಈ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯಲ್ಲಿ ಊರ ವಿದ್ಯಾಭಿಮಾನಿಗಳು, ಪೋಷಕರು, ಮಕ್ಕಳು, ಹಳೆ ವಿದ್ಯಾರ್ಥಿಗಳು ಆಗಮಿಸಿದ್ದರು.


## ಬಾರ್ಕೂರು ಮಾಸ್ತಿಯಮ್ಮ ದೇವಸ್ಥಾನದಲ್ಲಿ ವಾರ್ಷಿಕೋತ್ಸವ



ಬಾರಕೂರು ಮಸ್ಕಿಬೈಲು ಸಾರ್ವಜನಿಕ ನಾಗಬನ, ಸಪರಿವಾರ ಪಂಜುರ್ಲಿ ದೈವಸ್ಥಾನದಲ್ಲಿ ವಾರ್ಷಿಕ ಬ್ರಹ್ಮಕಲಶೋತ್ಸವ, ಅನ್ನಸಂತರ್ಪಣೆ ವೇ.ಮೂ.ಉಮೇಶ ಬಾಯರಿ ಇವರ ನೇತೃತ್ವದಲ್ಲಿ ಜರುಗಿತು. ರಾಧಾಕೃಷ್ಣರಾವ್, ಮಂಜುನಾಥ್ ರಾವ್, ಜಯರಾಮ.ಎಂ.ರಾವ್, ಭಾಸ್ಕರ ಹೆಬ್ಬಾರ್, ಜ್ಯೋತಿ.ಜೆ.ರಾವ್, ತುಳಸಿ ರಾವ್, ಗಣೇಶ ರಾವ್, ನಟರಾಜ ರಾವ್ ಸಿಲ್ವಾಸ, ಸುರೇಶ ರಾವ್ ಮೈಸೂರು, ರಾಘವೇಂದ್ರ ರಾವ್, ಪಿ.ಜಯರಾಮ.ರಾವ್, ಸುಮಂಗಲಾ ಎಂ ಇವರ ಸಹಕಾರದಲ್ಲಿ ಕಾರ್ಯಕ್ರಮ ಜರುಗಿತು.

## ಮುಂಡ್ಕೂರು ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕೋತ್ಸವ

ಕಾರ್ಕಳ ತಾಲೂಕು ಮುಂಡ್ಕೂರು ಅನ್ನಪೂರ್ಣೇಶ್ವರಿ ದೇವಸ್ಥಾನದ ವಾರ್ಷಿಕಮಹೋತ್ಸವವು ಮಾಘ ಶುದ್ಧ ನವಮಿ ತಾ 05-02-2017ನೇ ರವಿವಾರದಂದು ವಿಜೃಂಭಣೆಯಿಂದ ನೆರವೇರಿತು. ಬೆಳಿಗ್ಗೆ ಪ್ರಾರ್ಥನೆ, ಪುಣ್ಯಾಹವಾಚನದೊಂದಿಗೆ ಕಾರ್ಯಕ್ರಮಗಳು ಆರಂಭಗೊಂದು ಶ್ರೀ ಗಣಪತಿ ಹೋಮ, ದುರ್ಗಾಹೋಮ, ಪಂಚಾಮೃತಾಭಿಷೇಕ, ಅಧಿವಾಸಹೋಮ ಹಾಗೂ ಅನ್ನಪೂರ್ಣೇಶ್ವರಿ ದೇವಿಗೆ ಕಲಶಾಭಿಷೇಕ ಇತ್ಯಾದಿ ಕಾರ್ಯಕ್ರಮಗಳು ನೆರವೇರಿದವು. ಮಧ್ಯಾಹ್ನ ಶ್ರೀದೇವಿಗೆ ಮಹಾಪೂಜೆಯಾದ ಬಳಿಕ ಅನ್ನಸಂತರ್ಪಣೆ ನಡೆಯಿತು. ಸಂಜೆ ಸಾಮೂಹಿಕ ಹೂವಿನ ಪೂಜೆ, ರಂಗಪೂಜೆ ಹಾಗೂ ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಭಾದವರಿಂದ ಭಜನಾ ಕಾರ್ಯಕ್ರಮ ನೆರವೇರಿತು ಬ್ರಹ್ಮಶ್ರೀ ಪಾವಂಜೆ ವಾಗೀಶಶಾಸ್ತ್ರಿಗಳ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಆಡಳಿತ ಮೊಕ್ತೇಸರರಾದ ಶ್ರೀ ಬಿ.ವಿ.ರಾವ್‌ರವರ ಉಸ್ತುವಾರಿಯಲ್ಲಿ ಅಚ್ಚುಕಟ್ಟಾಗಿ ವಾರ್ಷಿಕೋತ್ಸವವು ಸಂಪನ್ನವಾಯಿತು.



## ಚಿತ್ರರಚನೆಯಲ್ಲಿ ಬಹುಮಾನ

ಅಯರ್ಲೆಂಡಿನ ಪ್ರಮೇರಿಕಾದಲ್ಲಿ ಇಂಜಿನಿಯರ್ ವೃತ್ತಿಯಲ್ಲಿರುವ ಶ್ರೀಮತಿ ಅಪೂರ್ವಾ (ಶ್ರೀ ಬಿ. ಜಯರಾಮರಾವ್ ಹಾಗೂ ವೀಣಾ ದಂಪತಿಗಳ ಸೊಸೆ)ಳಿಗೆ ಅವಳು ರಚಿಸಿದ ಚಿತ್ರಕಲೆಗೆ ಅವಳು ಕೆಲಸ ಮಾಡುತ್ತಿರುವ ಕಂಪನಿಯವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಈಕೆ ಪೆನ್ಸಿಲ್ ಡ್ರಾಯಿಂಗ್ ಚಿತ್ರಕಲೆಯಲ್ಲಿ ಪರಿಣಿತಳು.

## ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ

ಗತ ವರ್ಷದಂತೆ, ಶ್ರೀ ಶಾಂಕರ ತತ್ತ್ವ ಪ್ರಸಾರ ಅಭಿಯಾನದ ಅಂಗವಾಗಿ, ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ ಕರ್ನಾಟಕಾದ್ಯಂತ, ಕಳೆದ ಜನವರಿ 15ರಿಂದ ಆರಂಭಗೊಂಡು ಬರುವ ಮೇ ತಿಂಗಳ 7ನೇ ತಾರೀಕಿನವರೆಗೆ ನಡೆಯಲಿದೆ. ಈ ಅಭಿಯಾನವು ತಾ.14-1-2017ರಂದು ಜಿಲ್ಲಾ ಸಂಚಾಲಕ ಶ್ರೀ ಪ್ರಫುಲ್ಲಚಂದ್ರರ ನೇತೃತ್ವದಲ್ಲಿ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಉದ್ಘಾಟನೆಗೊಂಡಿದ್ದು, ಇಲ್ಲಿ ಪ್ರತಿ ಭಾನುವಾರ ಸಂಜೆ ಗಂಟೆ 4-30ರಿಂದ 5-30ರ ತನಕ ಹಾಗೂ ಬೈಲಕೆರೆ ವಾದಿರಾಜ 2ನೇ ಅಡ್ಡರಸ್ತೆಯಲ್ಲಿರುವ 'ಪ್ರತೀಕ' ವಸತಿ ಸಂಕೀರ್ಣದಲ್ಲಿ ಅದೇ ದಿನ ಸಂಜೆ 6ರಿಂದ 7ರ ತನಕ ನಡೆಯುತ್ತಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**-ಯು.ಪ್ರಫುಲ್ಲಚಂದ್ರ ರಾವ್, (ಜಿಲ್ಲಾಸಂಚಾಲಕರು), ಮೊಬೈಲ್ : 9880896166**

## ಶೃಂಗೇರಿ ಶ್ರೀ ಶಾರದಾಲಯ ಸ್ವರ್ಣಶಿಖರ ಕುಂಭಾಭಿಷೇಕ



ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ಶೃಂಗೇರಿ ಶಾರದಾ ದೇವಸ್ಥಾನದ ಪ್ರಸ್ತುತ ಶ್ರೀ ಶಾರದಾಂಭೆಯ ಸ್ವರ್ಣವಿಗ್ರಹವು ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳು 14ನೆಯ ಶತಮಾನದಲ್ಲಿ ಪ್ರತಿಷ್ಠಾಪಿಸಿದ್ದುದಾಗಿದೆ. ಶ್ರೀ ಶಾರದಾಪೀಠದ 33ನೇ ಅಧಿಪತಿಗಳಾದ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರು 20ನೆಯ ಶತಮಾನದಲ್ಲಿ ವಿಶಾಲವಾದ ಶಿಲಾಮಯ ದೇವಸ್ಥಾನವನ್ನು ಕಟ್ಟಿಸಿದರು. ಪ್ರಸ್ತುತ ಶ್ರೀಶಾರದಾಪೀಠಾಧೀಶ್ವರರಾದ ಶ್ರೀಶ್ರೀಭಾರತೀತೀರ್ಥಮಹಾಸ್ವಾಮಿಗಳವರ ಅಪ್ಪಣೆಯಂತೆ ಸ್ವರ್ಣಲೇಪಿತ ವಿಮಾನಗೋಪುರ ಕುಂಭಾಭಿಷೇಕವನ್ನು ಪೀಠದ ಸಂಪ್ರದಾಯಕ್ಕನುಸಾರವಾಗಿ 28-1-2017ರಿಂದ 13-2-2017ರ ತನಕ ಶ್ರೀ ಶಾರದಾಂಬಾ ರಥೋತ್ಸವದೊಂದಿಗೆ ವಿಜೃಂಭಣೆಯಿಂದ ನೆರವೇರಿಸಲಾಯಿತು. ಈ ಶುಭಸಂದರ್ಭದಲ್ಲಿ ಶ್ರೀ ಶಾರದಾಪೀಠದ ಪರಂಪರಾಗತ ಶಿಷ್ಯರಾದ ಕರಾವಳಿ ಜಿಲ್ಲೆಯ ನಮ್ಮ ಸಮಾಜಬಾಂಧವರು ವಿವಿಧ ಸಂಘಗಳ ನೇತೃತ್ವದಲ್ಲಿ ಶೃಂಗೇರಿಗೆ ಭೇಟಿಯಿತ್ತು, ಹೊರೆಕಾಣಿಕೆ ಫಲಪುಷ್ಪ ಸಮರ್ಪಿಸಿ ಗುರುಗಳಿಂದ ಆಶೀರ್ವಾದ ಪಡೆದರು.

## ಬಿ.ವಿ.ರಾವ್‌ರವರ ಕವಿತೆಗಳ ಸಂಗೀತ ಕಾರ್ಯಕ್ರಮ



ತಾ.17-12-2016ರಂದು ಭಾರತ ವಿಕಾಸ ಪರಿಷತ್ತಿನ ವಿದ್ಯಾರಣ್ಯ ಶಾಖೆಯ ವತಿಯಿಂದ ಬೆಂಗಳೂರಿನ ವಿಜಯನಗರದ ನಚಿಕೇತ ಮನೋವಿಕಾಸ ಕೇಂದ್ರದಲ್ಲಿ ಇಂಜಿನಿಯರ್ ಮತ್ತು ವಿಕಾಸ ಕವಿ ಶ್ರೀ ಬಿ.ವಿ.ರಾವ್ ಅವರ ಗೀತೆಗಳ ಮೇಲೆ ಸಂಗೀತ ಕಾರ್ಯಕ್ರಮ ನಡೆಯಿತು. ಹಾಡಿದವರು ಶ್ರೀ ದಾಮೋದರ ವಿ.ನಾಯಕ್ ಅವರು. ಹಂಪಿನಗರದ ಸರಕಾರೀ ಕಾಲೇಜಿನ ಕನ್ನಡ ಪ್ರಾಧ್ಯಾಪಿಕೆ ಆಗಿರುವ ಶ್ರೀಮತಿ ಡಾ। ಲಲಿತಾಂಬ ಅವರು ವಾಖ್ಯಾನ ಮಾಡಿದರು. ಸಂಗೀತವೂ ಮತ್ತು ವಾಖ್ಯಾನವೂ ಸಭಿಕರ ಮನಸೂರೆಗೊಂಡಿತು. ಕಾವ್ಯಾಸಕ್ತರು ಬಿ.ವಿ.ರಾವ್ ಅವರನ್ನು 9880201725ರಲ್ಲಿ ಅಥವಾ bvrao46@gmail.com ನಲ್ಲಿ ಸಂಪರ್ಕಿಸಬಹುದು.

## ಶಂಕರ ಜಯಂತ್ಯುತ್ಸವ - ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

ಸರಕಾರದ ಆದೇಶದಂತೆ ಶ್ರೀ ಆದಿಶಂಕರಾಚಾರ್ಯರ ಜಯಂತ್ಯುತ್ಸವವನ್ನು ಎಲ್ಲೆಡೆ 'ತತ್ತ್ವಜ್ಞಾನಿಗಳ ದಿನ'ವಾಗಿ ಆಚರಿಸಲಾಗುತ್ತಿದ್ದು, ಅದರ ಅಂಗವಾಗಿ ಇಲ್ಲಿನ ಶ್ರೀ ಕುಂದೇಶ್ವರ ದೇವಸ್ಥಾನದ ಮತ್ತು ಬ್ರಾಹ್ಮಣ ಪರಿಷತ್ತಿನ ಕುಂದಾಪುರ ವಲಯದ ಸಂಯುಕ್ತ ಆಶ್ರಯದಲ್ಲಿ ಸಾರ್ವಜನಿಕರಿಗಾಗಿ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ.

ಆಸಕ್ತರು '**ಶ್ರೀ ಶಂಕರಾಚಾರ್ಯರು ತೋರಿಸಿದ ಸಾರ್ಥಕ ಬದುಕಿನ ದಾರಿ**' ಕುರಿತು ಫುಲ್‌ಸ್ಕೇಪ್ ಕಾಗದದಲ್ಲಿ ಹತ್ತು ಪುಟಗಳಿಗೆ ಮೀರದಂತೆ ಕನ್ನಡ, ಇಂಗ್ಲೀಷ್ ಅಥವಾ ಸಂಸ್ಕೃತದಲ್ಲಿ ಪ್ರಬಂಧವೊಂದನ್ನು ಬರೆದು ಏಪ್ರಿಲ್ 15, 2017ರ ಒಳಗೆ 'ಶ್ರೀ ಕುಂದೇಶ್ವರ ದೇವಸ್ಥಾನ, ಕುಂದಾಪುರ-576201; ಉಡುಪಿ ಜಿಲ್ಲೆ' ವಿಳಾಸಕ್ಕೆ ತಲುಪಿಸಬೇಕೆಂದು ಬಿನ್ನಹ.

ಸ್ಪರ್ಧಾ ವಿಜೇತರಿಗೆ ಏಪ್ರಿಲ್ 30ರಂದು ನಡೆಯಲಿರುವ ಶಂಕರ ಜಯಂತ್ಯುತ್ಸವದ ಸಾರ್ವಜನಿಕ ಸಭೆಯಲ್ಲಿ ಅನುಕ್ರಮವಾಗಿ ಮೂರು ಆಕರ್ಷಕ ಬಹುಮಾನಗಳನ್ನು ನೀಡಿ, ಅಭಿನಂದಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.


**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್- 9886629697, 9986119865

SAMPATH KUMAR
Mobile : 9741508881
8884873233

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.16-03-2017 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.21-02-2017 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.03-03-2017 ಮತ್ತು ತಾ.17-03-2017 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಸೋಮನಾಥ ದೇವಸ್ಥಾನ

**ಬಿರುಗೋಳಿ, ಉಪ್ಪಳ, ಕಾಸರಗೋಡು**

ಆತ್ಮೀಯ ಭಗವದ್ಭಕ್ತರೇ,

**ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ**
**ಶ್ರೀ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ**
**ಜಗದ್ಗುರು ಶ್ರೀ ಶ್ರೀ ಭಾರತೀರ್ಥ ಮಹಾಸ್ವಾಮಿಗಳವರ ಮತ್ತು**
**ತತ್ಕರ ಕಮಲಸಂಜಾತರಾದ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರ**
**ಪರಮಾನುಗ್ರಹದಿಂದ**

ಸ್ವಸ್ತಿ । ಶಾಲಿವಾಹನ ಶಕವರ್ಷ ೧೯೩೮ನೇ ಹೇಮಲಂಬಿನಾಮ ಸಂವತ್ಸರದ ಚೈತ್ರ ಮಾಸ ಕೃಷ್ಣ ಅಷ್ಟಮಿಯಿಂದ ತ್ರಯೋದಶಿಯ ಪರ್ಯಂತ ದಿನಾಂಕ 19-04-2017ನೇ ಬುಧವಾರದಿಂದ 24-04-2017ನೇ ಸೋಮವಾರದ ವರೆಗೆ

**ಶ್ರೀ ಸೋಮನಾಥ ದೇವರ**

### ಪುನರ್‌ಪ್ರತಿಷ್ಠಾ-ಬ್ರಹ್ಮಕುಂಭಾಭಿಷೇಕ ಮಹೋತ್ಸವವು

ಬ್ರಹ್ಮಶ್ರೀ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿ
ಇವರ ನೇತೃತ್ವದಲ್ಲಿ ನಡೆಯಲಿರುವುದು.

ಭಕ್ತಾಧಿಗಳಾದ ತಾವೆಲ್ಲರೂ ಆಗಮಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಅಧ್ಯಕ್ಷರು ಮತ್ತು ಸರ್ವ ಸದಸ್ಯರು**
ಜೀರ್ಣೋದ್ಧಾರ ಸಮಿತಿ

**ಅಧ್ಯಕ್ಷರು ಮತ್ತು ಸದಸ್ಯರು**
ಆಡಳಿತ ಸಮಿತಿ.

॥ ಶ್ರೀ ರಾಜರಾಜೇಶ್ವರೀ ಪ್ರಸನ್ನಾ ॥

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಅಂಚೆ : ಕೋಡಿಂಬಾಡಿ - 574325, ಪುತ್ತೂರು ತಾಲೂಕು, ದ.ಕ.**

ಆತ್ಮೀಯ ಭಗವದ್ಭಕ್ತರೇ,

**ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ**
**ಶ್ರೀ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ**
**ಜಗದ್ಗುರು ಶ್ರೀ ಶ್ರೀ ಭಾರತೀರ್ಥ ಮಹಾಸ್ವಾಮಿಗಳವರ ಮತ್ತು**
**ತತ್ಕರ ಕಮಲಸಂಜಾತರಾದ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರ**
**ಪರಮಾನುಗ್ರಹದಿಂದ**

ಸ್ವಸ್ತಿ । ಶ್ರೀ ದುರ್ಮುಖ ನಾಮ ಸಂವತ್ಸರದ ಫಾಲ್ಗುಣ ಪೌರ್ಣಮಿ,
ದಿನಾಂಕ 12-03-2017ನೇ ರವಿವಾರ

**ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ಅಮ್ಮನವರ**

### ವಾರ್ಷಿಕ ಜಾತ್ರಾ ಮಹೋತ್ಸವವು

ಬ್ರಹ್ಮಶ್ರೀ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿ
ಇವರ ನೇತೃತ್ವದಲ್ಲಿ ನಡೆಯಲಿರುವುದು.

ಭಕ್ತಾಧಿಗಳಾದ ತಾವೆಲ್ಲರೂ ಆಗಮಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಅಧ್ಯಕ್ಷರು ಮತ್ತು ಸರ್ವ ಸದಸ್ಯರು**
ಜೀರ್ಣೋದ್ಧಾರ ಸಮಿತಿ

**ಅಧ್ಯಕ್ಷರು ಮತ್ತು ಸದಸ್ಯರು**
ಆಡಳಿತ ಸಮಿತಿ.

**ಅರ್ಚಕರು : ಶ್ರೀ ಯಂ.ನಾಗೇಶ ಶರ್ಮ**

॥ ಶ್ರೀ ಸುಬ್ರಹ್ಮಣ್ಯಃ ಪ್ರಸೀದತು ॥

ಆತ್ಮೀಯ ಭಗವದ್ಭಕ್ತರೇ, ಕಾಂತಮಂಗಲ, ದಿನಾಂಕ 15-01-2017

**ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಾಧೀಶ್ವರರಾದ ಶ್ರೀಮದ್‌ಜಗದ್ಗುರು ಶಂಕರಾಚಾರ್ಯ**
**ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ**
**ಮತ್ತು ತತ್ಕರಕಮಲ ಸಂಜಾತರಾದ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ**
**ಪರಮಾನುಗ್ರಹದಿಂದ**

ಸ್ವಸ್ತಿ। ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ 1938ನೇ ದುರ್ಮುಖ ನಾಮ ಸಂವತ್ಸದ
ಕುಂಭಮಾಸ ದಿನ 5ನೇ ದಿನ, ದಿನಾಂಕ 17-02-2017 ಶುಕ್ರವಾರ
**ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ**

### ಕಾಂತಮಂಗಲ ಶ್ರೀ ಸುಬ್ರಹ್ಮಣ್ಯ ದೇವರ ಪ್ರತಿಷ್ಠಾದಿನೋತ್ಸವವು


ಸಂಪನ್ನಗೊಳ್ಳಲಿರುವುದು.
ಆ ಪ್ರಯುಕ್ತ ನೆರವೇರಲಿರುವ ಎಲ್ಲ ದೇವತಾಕಾರ್ಯಕ್ರಮಗಳಿಗೆ
ಭಕ್ತ ಮಹಾಜನರು ಆಗಮಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀಮುಡಿಗಂಧಪ್ರಸಾದವನ್ನು
ಸ್ವೀಕರಿಸಿ, ಶ್ರೀ ಸುಬ್ರಹ್ಮಣ್ಯದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

- **ಶ್ರೀ ಎ.ಶಿವರಾವ್ ಬಯಂಬು,** ಅನುವಂಶಿಕ ಆಡಳಿತ ಮೊಕ್ತೇಸರರು

With Best Compliments From :

Ph : 98459 92859

**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.





**ಎಮ್. ದೇವಾನಂದ್ ಭಟ್** Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



# ವಿಶಿಷ್ಟ ಪ್ರತಿಭೆಯ ಕತೆಗಾರ ಎಂ.ವ್ಯಾಸ

- ವೈ. ಮೋಹನ ರಾವ್

ಕಾಂತಾವರ ಕನ್ನಡ ಸಂಘದ ಅಧ್ಯಕ್ಷರಾದ ಡಾ.ನಾ.ಮೊಗಸಾಲೆ ಇವರು ಈ ರೀತಿ ಹೇಳುತ್ತಾರೆ - ''ನಾಡಿಗೆ ನಮಸ್ಕಾರ ಎನ್ನುವುದು ಕಾಂತಾವರ ಕನ್ನಡ ಸಂಘವು ಮೂವತ್ತಕ್ಕೆ ಕಾಲಿಟ್ಟದ್ದನ್ನು ನೆನಪಿಸುವ ಮತ್ತು ಗುರುತಿಸುವ ಗ್ರಂಥಮಾಲೆ. ಆ ಮಾಲೆಯ ಮೂಲಕ ಕನಿಷ್ಠ ಮೂವತ್ತು ಹೊತ್ತಗೆಗಳನ್ನಾದರೂ ಮುಂದಿನ ಮೂರು ವರುಷಗಳಲ್ಲಿ ತರಬೇಕೆನ್ನುವುದು ಆಗ ಇದ್ದ ಸಂಕಲ್ಪ.

ಎಂ.ವ್ಯಾಸ ಅವರ ಕುರಿತಾದ ಕೃತಿ ಪ್ರಕಟಣೆಗೆ ವಿಶೇಷ ಆಸಕ್ತಿ ತೋರಿಸಿ ಈ ಕೃತಿಯನ್ನು ಬರೆದುಕೊಟ್ಟಿದ್ದಲ್ಲದೆ, ಕೃತಿಯ ಪ್ರಕಟಣೆಯ ಪ್ರಾಯೋಜಕತ್ವವನ್ನು ವಹಿಸಿಕೊಂಡ ಡಾ.ವರದರಾಜ ಚಂದ್ರಗಿರಿ ಅವರಿಗೆ ಸಂಘವು ಋಣಿಯಾಗಿದೆ''.

''ಕಾಂತಾವರ ಕನ್ನಡ ಸಂಘದ ಮಹತ್ವದ ಯೋಜನೆ 'ನಾಡಿಗೆ ನಮಸ್ಕಾರ' ಶತಮಾನೋತ್ತರ ಕೃತಿ ಮಾಲೆಯ ಸಂಪಾದಕತ್ವವನ್ನು ಕನ್ನಡ ಸಂಘದ ಅಧ್ಯಕ್ಷರಾದ ಡಾ.ನಾ.ಮೊಗಸಾಲೆಯವರು ನನಗೆ ವಹಿಸಿದ್ದಾರೆ.

ವಿಶಿಷ್ಟ ಪ್ರತಿಭೆಯ ಕತೆಗಾರ ಎಂ.ವ್ಯಾಸ ಅವರ ಕುರಿತಾದ ಈ ಕೃತಿಯನ್ನು ಬರೆದುಕೊಟ್ಟು ಮಾಲೆಯ ಮಹತ್ವವನ್ನು ಹೆಚ್ಚಿಸಿದ ಡಾ.ವರದರಾಜ ಚಂದ್ರಗಿರಿ ಅವರಿಗೆ ಸಂಘವು ಋಣಿಯಾಗಿದೆ'' ಎಂದು ಡಾ.ಬಿ.ಜನಾರ್ದನ ಭಟ್ ಹೇಳುತ್ತಾರೆ.


ಡಾ.ವರದರಾಜ ಚಂದ್ರಗಿರಿ ಅವರು ಕೃತಿಯಲ್ಲಿ ಹೇಳುವ ಕೆಲವು ಸಂಗತಿಗಳು : ಕಾಸರಗೋಡಿನ ಎಂ.ವ್ಯಾಸ ಅವರು ತಮ್ಮ ವಿಶಿಷ್ಟ ಕತೆಗಳಿಂದ ಅಪೂರ್ವ ಕತೆಗಾರ ಎಂದು ಗುರುತಿಸಿಕೊಂಡವರು. ಹಾಗೆಯೇ ತನ್ನ ಅಂತರ್ಮುಖಿ ಬದುಕಿನಿಂದಾಗಿ ಸಾರ್ವಜನಿಕ ವಾಗಿ ಹೆಚ್ಚು ಗುರುತಿಸಿಕೊಳ್ಳದೆ ದೂರ ಉಳಿದವರು. ಹಾಗಾಗಿಯೇ ಸಾಹಿತ್ಯ ವಲಯದಲ್ಲಿ ಅವರ ಬಗ್ಗೆ ಕುತೂಹಲ, ಬೆರಗು, ಭಯ, ನಿರ್ಲಕ್ಷ್ಯ ಎಲ್ಲವೂ ನಡೆದಿದೆ. ಹೀಗಾಗಿ ಇದೀಗ ಸಿದ್ಧ ಚೌಕಟ್ಟೊಂದರಲ್ಲಿ ಅವರ ಪೂರ್ತಿ ಪರಿಚಯವನ್ನು ಹಿಡಿದಿಡುವುದೂ ಕಷ್ಟವೇ ಆಗಿದೆ. ಅವರ ಏಕಾಂತ ಮತ್ತು ಅದರ ಹಿಂದಿನ ಕಾರಣಗಳನ್ನು ವಿಶ್ಲೇಷಿಸುತ್ತಾ ಹೋದಂತೆಯೇ ಅವರ ಮನುಷ್ಯ ಪ್ರೀತಿಯ, ಆತ್ಮೀಯತೆಯ ಮುಖ ಮರೆಯಾಗಿ ಹೋಗಿಬಿಡುವ ಅಪಾಯವಿದೆ. ಒಮ್ಮೆಯೂ ವೇದಿಕೆ ಹತ್ತದ, ಸಾಹಿತ್ಯದ ಬಗ್ಗೆ ಬಹಿರಂಗವಾಗಿ ಮಾತನಾಡದ ಅವರ ನಿಲುವನ್ನು ನೋಡಿ ವ್ಯಾಸರ ತಿಳುವಳಿಕೆ ಇಷ್ಟೇ ಎಂಬ ತೀರ್ಮಾನಕ್ಕೆ ಬಂದರೆ, ಅವರ ಕತೆಗಳ ಆಳ ವಿಸ್ತಾರಗಳನ್ನೂ ಪ್ರಯೋಗಶೀಲತೆಯನ್ನು ಕಂಡಾಗ, ಅವರೆದುರು ಕೂತು ಹರಟುವಾಗ, ದೊರೆಯುವ ನೋಟಗಳೇ ಬೇರೆ. ಹೀಗೆ ಈ ಅಂತರಂಗ-ಬಹಿರಂಗಗಳ ಮಧ್ಯೆ ನಿಂತು ವ್ಯಾಸರ ವ್ಯಕ್ತಿಚಿತ್ರಣ ಮಾಡುವುದು ಸವಾಲೇ ಸರಿ.

ವ್ಯಾಸರ ಬದುಕಿನಲ್ಲಿ ನಡೆದ ಬಹುದೊಡ್ಡ ಆಘಾತವೊಂದು ಅವರ ಬದುಕನ್ನೇ ತಿರುಗಿಸಿದ ಹಾಗೆ ಅವರೊಳಗಿನ ಸೃಜನಶೀಲ ಲೇಖಕ ಪ್ರತಿಭೆಯನ್ನೂ ಜಾಗ್ರತಿಗೊಳಿಸಿತು. ಆಗಿನ್ನೂ ವ್ಯಾಸರಿಗೆ ಹತ್ತೊಂಬತ್ತು ವರ್ಷ. ಇನ್ನೂ ಪದವಿ ಶಿಕ್ಷಣ ಪೂರ್ತಿಯಾಗಿರಲಿಲ್ಲ. 1960ರ ಮಳೆಗಾಲದ ಒಂದು ಹಗಲು ಅವರ ತಂದೆ ಬರ್ಬರವಾಗಿ ಕೊಲ್ಲಲ್ಪಟ್ಟರು. ಯಾವುದೋ ಜಮೀನ್ದಾರ್-ಗೇಣಿ ವ್ಯಾಜ್ಯವು ಅದಕ್ಕೆ ಕಾರಣವಾಗಿರ ಬೇಕು.

ಆ ಕಾಲದ ಇಲ್ಲಿನ ಕನ್ನಡಿಗರ ಕ್ರಿಯಾಶೀಲತೆಯ ದ್ಯೋತಕ. ವ್ಯಾಸರೂ ಇಂಥದ್ದೊಂದು ಪ್ರಯತ್ನಕ್ಕೆ ಕೈಹಾಕಿದ್ದರು. 1966ರಲ್ಲಿ ಗೆಳೆಯರ ಸಹಕಾರದಿಂದ 'ಅಜಂತ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು.

ವ್ಯಾಸರ ಕತೆಗಳನ್ನು ಓದಿದವರಿಗೆ ದುರ್ಗಾಪುರ ಮತ್ತು ಶಂಕರೀನದಿ ಈ ಎರಡು ಪದಗಳ ಪರಿಚಯ ವಿರಬಹುದು. ದುರ್ಗಾಪುರ ಎಂಬ ಊರು ಮತ್ತು ಅಲ್ಲಿ ಹರಿಯುವ ಶಂಕರೀನದಿ. ಇವೆರಡೂ ವ್ಯಾಸರ ಕಾಲ್ಪನಿಕ ಸೃಷ್ಟಿ. (ಆರ್.ಕೆ.ನಾರಾಯಣ್ ಅವರ ಮಾಲ್ಗುಡಿ, ಚಿತ್ತಾಲರ ಹನೇಹಳ್ಳಿ ನೆನಪಾಗುವುದಿದೆ)

'ಚುಂಬನ' ಎನ್ನುವುದು ನನ್ನ ಮೊದಲ ಕತೆ-ಎಂದು ವ್ಯಾಸರು ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ. ಅದು ಪ್ರಕಟವಾದದ್ದು 1962ನೇ ಇಸವಿಯ ಡಿಸೆಂಬರ್ ತಿಂಗಳಿನ 'ಜನಪ್ರಗತಿ'ಯಲ್ಲಿ. ಆಗ ವ್ಯಾಸರಿಗೆ ಇಪ್ಪತ್ತೊಂದು ವರ್ಷ.



ಕೃತಿ : 'ವಿಶಿಷ್ಟ ಪ್ರತಿಭೆಯ ಕತೆಗಾರ ಎಂ.ವ್ಯಾಸ', ಲೇಖಕರು : ಡಾ. ವರದರಾಜ ಚಂದ್ರಗಿರಿ ಪ್ರಕಾಶಕರು : ಕನ್ನಡ ಸಂಘ, ಕಾಂತಾವರ (ರಿ.) ಬೆಲೆ : ರೂ.45/-

ವ್ಯಾಸರು ಎಷ್ಟು ಕತೆಗಳನ್ನು ಬರೆದಿದ್ದಾರೆ? ಅವರಂತೂ ಲೆಕ್ಕವಿಟ್ಟವರಲ್ಲ. ಆ ಕ್ಷಣದ ತೀವ್ರತೆಯು ಯಾವ ರೂಪ ತಾಳಿತೋ ಆ ಸೃಷ್ಟಿ ಅಲ್ಲಿಗೇ ಮುಗಿಯಿತು. ಅದು ಕತೆಯೂ ಆಗಬಹುದು, ಕವನವೂ ಆಗಬಹುದು, ಲೇಖನವೂ ಆಗಬಹುದು. ವ್ಯಾಸರನ್ನು ಕತೆಗಾರ ಎಂದು ಗುರುತಿಸಲಾಗುವು ದಾದರೂ ಅವರ ಸಾಕಷ್ಟು ಕವನಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ.

ಕಂಬನಿ ವ್ಯಾಸರ ಮೊದಲ ಕಥಾ ಸಂಕಲನ. ಮುಂದೆ ಎಪ್ಪತ್ತರ ದಶಕದಲ್ಲಿ ವ್ಯಾಸರು ನಿರಂತರವಾಗಿ ಬರೆಯುತ್ತಿದ್ದರು. ಅವೆಲ್ಲವೂ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಈ ಹಂತದಲ್ಲೇ ಕತೆಗಳಿಗೆ ಎರಡಕ್ಷರದ ಶೀರ್ಷಿಕೆಯನ್ನಿಡಲಾರಂಭಿಸಿದರು. ಅದನ್ನು ಕೊನೆಯವರೆಗೂ ಉಳಿಸಿಕೊಂಡು ಬಂದರು. ವ್ಯಾಸರ ಮಾಸ್ಟರ್ ಪೀಸ್‌ಗಳೆಂದು ಕರೆಯಬಹುದಾದ ಕತೆಗಳು ರಚನೆಯಾಗುವುದು 1980ರ ನಂತರವೇ.

ರಥ, ಕ್ಷೇತ್ರ ಮತ್ತು ಸ್ನಾನ ಎಂಬ ಮೂರು ನೀಳ್ಗತೆಗಳ (ಕಿರುಕಾದಂಬರಿ) ಸಂಕಲನ. ವ್ಯಾಸರ ನಾಲ್ಕನೆಯ ಪ್ರಕಟಿತ ಕಥಾ ಸಂಕಲನ-'ತಪ್ತ'. ತಪ್ತದಲ್ಲಿ ಬರುವ ಕತೆಗಳಲ್ಲಿ ವ್ಯಾಸರು ತಂತ್ರದ ದೃಷ್ಟಿಯಿಂದ ನಡೆಸಿದ ಪ್ರಯೋಗಗಳು ಗಮನಾರ್ಹ.

'ಕಾಂತ' ವ್ಯಾಸರ ಮರಣೋತ್ತರದಲ್ಲಿ ಪ್ರಕಟವಾದ ನಾಲ್ಕನೆಯ ಕಥಾ ಸಂಕಲನ. 'ದಡ', 'ಓಟ'ವನ್ನು ಬೆಂಗಳೂರಿನ ಸಾಧನಾ ಪ್ರಕಾಶದವರು ಪ್ರಕಟಿಸಿದ್ದರು.

ಕತೆಗಾರರಾಗಿಯೇ ಪರಿಚಿತರಾದ ವ್ಯಾಸರು ಹಲವಾರು ಕವನಗಳನ್ನೂ ಬರೆದು ಪ್ರಕಟಿಸಿದ್ದಾರೆ. ಸುಳಿ (1972) ಮತ್ತು ಕ್ಷೇತ್ರ (1998) ಎಂಬೆರಡು ಕವನ ಸಂಕಲನಗಳು ಅವರು ಬದುಕಿದ್ದಾಗಲೇ ಪ್ರಕಟವಾಗಿತ್ತು

ವ್ಯಾಸರ ಬದುಕಿನ ಕೊನೆಯ 10-15 ವರ್ಷಗಳು ಸಾಹಿತ್ಯ ಸಂದರ್ಭದ ದೃಷ್ಟಿಯಿಂದ ಹೆಚ್ಚು ಮಹತ್ವದ್ದಾಗಿ ನನಗೆ ಕಾಣಿಸುತ್ತದೆ. ಈ ಅವಧಿಯಲ್ಲಿ ವ್ಯಾಸರು ತುಂಬ ಬದಲಾಗಿದ್ದರು. ತನ್ನ ಏಕಾಂತವನ್ನು ಕಾಪಿಟ್ಟುಕೊಂಡೇ ಹೊಸ ಜಗತ್ತಿಗೆ ಹೆಚ್ಚು ಹೆಚ್ಚು ತೆರೆದುಕೊಳ್ಳಲು ಪ್ರಾರಂಭಿಸಿದ್ದರು.

ಮಾಸ್ಟರ್ ಹಿರಣ್ಣಯ್ಯನವರೂ ವ್ಯಾಸರ ಕತೆಯೊಂದನ್ನು ನಾಟಕವಾಗಿಸುವ ಆಸಕ್ತಿ ವಹಿಸಿದ್ದರಂತೆ. ವ್ಯಾಸರ ಕಥೆಯೊಂದು ಸಿನೆಮಾ ಆದದ್ದು ದೊಡ್ಡ ಕತೆ. ವ್ಯಾಸರ ಮಗ ಡಾ.ತೇಜಸ್ವಿಯವರು ಈ ವಿವರಗಳನ್ನು ದಾಖಲಿಸಿದ್ದಾರೆ. (ನೋಡಿ: ಅರ್ಥ ಕಥಾನಕ ಲೇ.ಅನುಪಮಾ ಪ್ರಸಾದ್, 2015)

ಒಮ್ಮೆಯೂ ಹಾಸಿಗೆ ಹಿಡಿಯದಿದ್ದ ವ್ಯಾಸರು ಚಿಕೂನ್‌ಗುನ್ಯಾ ಎದುರು ಸೋತು ಹೋಗಿದ್ದರು. 2008 ಜುಲೈ 23ರಂದು ತನ್ನ ದೀರ್ಘಕಾಲದ ಆಸೆಯಂತೆ ತನ್ನ ಮನೆಯಲ್ಲೇ ಮಗನ ತೊಡೆಯಲ್ಲಿ ತಲೆಯಿಟ್ಟು ಕೊನೆಯುಸಿರೆಳೆದರು.

ಹೀಗೆ ವಿಶಿಷ್ಟ ಪ್ರತಿಭೆಯ ಕಥೆಗಾರ ಎಂ.ವ್ಯಾಸರ ಸಾಹಿತ್ಯಿಕ ಬದುಕಿನ ಹಲವಾರು ಸಂಗತಿಗಳನ್ನು ಲೇಖಕರು ಕೃತಿಯಲ್ಲಿ ತಿಳಿಸಿದ್ದಾರೆ. ವ್ಯಾಸರು ಕಥೆಗಳ ಮೂಲಕವಲ್ಲದೇ ಮತ್ಯಾವ ವಿಧದಲ್ಲೂ ಗುರುತಿಸಿ ಕೊಳ್ಳಲು ಬಯಸಿದವರಲ್ಲ, ಹೀಗಾಗಿ ಕನ್ನಡ ಸಾರಸ್ವತ ಲೋಕ ವ್ಯಾಸರ ಕಥೆಗಳನ್ನು ಮತ್ತೆ ಮತ್ತೆ ಓದುವಂತಾಗಬೇಕು.

# ಬೆಳ್ಳಟ್ಟಿಯಲ್ಲಿ ಸಂತಾನ ನಿಯಂತ್ರಣ

(ನನ್ನ ನೆನಪಿನಂಗಳದಿಂದ-ಜಿ.ಕೆ.ಕೊಳ್ಳೆ)

ಸಮುದ್ರ ಕರಾವಳಿಯ, ಹಚ್ಚಹಸುರ ಹಿನ್ನಾಡಿನ ಪ್ರಕೃತಿ ಸೌಂದರ್ಯದ ಮಧ್ಯದಲ್ಲಿ ಹುಟ್ಟಿ ಬೆಳೆದು ಬ್ಯಾಂಕಿಗೆ ಸೇರಿ, ಗೋವಾದಲ್ಲಿ ಅಧಿಕಾರಿಯಾಗಿದ್ದ ನಾನು 1976ರಲ್ಲಿ ವ್ಯವಸ್ಥಾಪಕನಾಗಿ (ಮೆನೇಜರ್) ಬಯಲುಸೀಮೆಯ ಧಾರವಾಡ ಜಿಲ್ಲೆಯ ನೀರಿಲ್ಲದೆ ಬರಡಾದ ''ಬೆಳ್ಳಟ್ಟಿ'' ಎಂಬ ಹಳ್ಳಿ ಶಾಖೆಯೊಂದಕ್ಕೆ ವರ್ಗಾವಣೆಗೊಂಡೆ. ದಿನಕ್ಕೆರಡು ಕೊಡಪಾನ ಕುಡಿಯುವ ಬಾವಿ ನೀರು, ಸ್ನಾನ ಇತ್ಯಾದಿಗೆ ಒಂದು 'ಚಕ್ಕಡಿ-ಡ್ರಮ್' ಕೆರೆನೀರಿನ ವ್ಯವಸ್ಥೆ ಮಾಡಿ, ''ನಾವಿಬ್ಬರು-ನಮಗಿಬ್ಬರು'' ಸಂಸಾರ ಆ ಕುಗ್ರಾಮದಲ್ಲಿ ಸ್ಥಾಪನೆಯಾಯ್ತು. ಅಡಿಗೆ ಹೊರತುಪಡಿಸಿ, ಮನೆಕೆಲಸವನ್ನು ಹಿಂದಿನ ಮೆನೇಜರ್ ನಿಯಮಿಸಿದ್ದ ಮುದುಕಿ ಮೋದಿನವ್ವ (ಮುಸ್ಲಿಸ್ತ್ರಿ ಹೆಂಗಸು) ಮುಂದುವರಿಸಿದಳು. ನನ್ನ ಸಣ್ಣ ಮಕ್ಕಳ ದೇಖರೇಖಿಗೆ ಅಗತ್ಯವೂ ಇತ್ತು. ಮುದುಕಿ ಮುಸ್ಲಿಂ ಜನಾಂಗದವ ಳಾದರೂ ಹಳ್ಳಿ 'ಹನುಮಪ್ಪನ' ಭಕ್ತೆ. ಹಿಂದೂ ಸಂಪ್ರದಾಯಗಳನ್ನು ತಿಳಿದು 'ಉಪವಾಸ', ಶಿವರಾತ್ರಿ, ಬಸವ ಜಯಂತಿ, ಇತ್ಯಾದಿಗಳನ್ನು ಆಚರಿಸುತ್ತಲೂ ಇದ್ದಳು. ಸ್ವಲ್ಪ ಸಮಯದಲ್ಲಿ ನಮಗೂ ಅಚ್ಚುಮೆಚ್ಚಾದಳು. ಬ್ಯಾಂಕ್ ಶಾಖೆಯಲ್ಲಿ ಉತ್ತರಕನ್ನಡ ಮಂಕಿಗ್ರಾಮದ 'ಭಟ್ಟ'ರೊಬ್ಬರನ್ನು ಬಿಟ್ಟರೆ, ಉಳಿದ 5-6 ಮಂದಿ ಬಯಲು ಸೀಮೆಯವರು. 'ಭಟ್ಟು' ಮಾತು-ಕೆಲಸದಲ್ಲಿ ಬಹಳ ಚಾಕಚಕ್ಯತೆ ಹೊಂದಿ, ಗಿರಾಕಿಗಳ ಅಭಿಮಾನಿಯಾಗಿದ್ದರು. ಕೆಲವೇ ದಿನಗಳಲ್ಲಿ ನನಗೂ ಹತ್ತಿರವಾಗಿ ಬ್ಯಾಂಕ್ ಕೆಲಸ ಕಾರ್ಯಗಳಲ್ಲಿ ನನ್ನ ಬಲಗೈಯಾದರು.

ಈ ಮಧ್ಯೆ ಜಾರಿಯಾದ ''ತುರ್ತುಪರಿಸ್ಥಿತಿ'' ಬ್ಯಾಂಕಿಂಗ್ ವ್ಯವಹಾರಕ್ಕೂ ಬಿಸಿಮುಟ್ಟಿಸಿತು. ರಾಷ್ಟ್ರೀಕರಣಗೊಂಡ ಬ್ಯಾಂಕುಗಳು ಬಡವರ ಪಾಲಿಗೆ ಆಸರೆಯಾಗಿ ಶೇ.4ರ ಬಡ್ಡಿದರದ ಸಾಲಗಳಿಗೆ ಆದ್ಯತೆ ನೀಡಿತು. ನನ್ನ ಶಾಖೆಯಿಂದ ಸುಮಾರು ನೂರು ಜನರನ್ನು ಗುರಿಮಾಡಿಕೊಂಡು (ವಡ್ಡರು-ಬಂಡಿವಡ್ಡರು-ಹಿಂದುಳಿದವರು-ಕೃಷಿ ಕಾರ್ಮಿಕರು ಇತ್ಯಾದಿ) ಬಡತನ ರೇಖೆಯಿಂದ ಕೆಳಗಿರುವವರಿಗೆ ಸಾಲ ಸೌಲಭ್ಯದ ವ್ಯವಸ್ಥೆ ಮಾಡುವರೆ ತೀರ್ಮಾನಿಸಲಾಯ್ತು. ಅದೊಂದು ಮರೆಯಲಾಗದ ದಿನ! ನಮ್ಮ ಶಾಖೆಯ ಗುಂಪು ಸಾಲ ಸೌಲಭ್ಯದ (Group Loan Scheme) ವಿತರಣಾ ದಿನ-ಕಾಕತಾಳೀಯವೆಂಬಂತೆ ಸರಕಾರದ ಕುಟುಂಬ ಕಲ್ಯಾಣ ಇಲಾಖೆಯವರು ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆಯನ್ನು ಪುರುಷರಿಗೆ ಏರ್ಪಡಿಸಿ ಊರ ಸಂತೆಗೆ ಬಂದ ಹಳ್ಳಿ ಹೈದರುಗಳನ್ನು, ಇಲಾಖೆಯಿಂದ ಕೊಡುವ ಪ್ರೋತ್ಸಾಹ ಧನದ ಆಮಿಷ ತೋರಿಸಿ ಚಿಕಿತ್ಸೆ ನಡೆಸಿಯೇ ಬಿಟ್ಟರು. ಕೆಲವರನ್ನು ಹೆದರಿಸಿ-ಬೆದರಿಸಿ ಕೂಡಾ ನಡೆಸಲಾಯಿತಂತೆ! ವಯಸ್ಸಾದ ಮುದುಕ ರನ್ನೂ ಬಿಡಲಿಲ್ಲವಂತೆ! ಆತಂಕದ ವಿಷಯವೆಂದರೆ ಕೆಲವು ಲಗ್ನವಾಗದ ಯುವಕರೂ ಈ ಚಿಕಿತ್ಸೆಗೆ ಒಳಪಟ್ಟರಂತೆ! ಇಲಾಖೆಗೆ, ಸರಕಾರದ ಗುರಿಮುಟ್ಟುವ ತವಕ. ನಮ್ಮ ಸಾಲ ವಿತರಣೆಯ ವಿಷಯ ತಿಳಿದು ಬ್ಯಾಂಕಿಗೆ ಇಲಾಖೆಯವರೆಂದು ಹೇಳಿಕೊಂಡು ಬಂದ ವ್ಯಕ್ತಿಗಳು, ಚಿಕಿತ್ಸೆ ಪಡೆದ ವ್ಯಕ್ತಿಗಳಿಗೆ ಮಾತ್ರ ಇಲಾಖೆಯ ಅಧಿಕೃತ ಪತ್ರವಿದ್ದರೆ ಹಣ ಬಿಡುಗಡೆ ಮಾಡಬೇಕೆಂದು ತಾಕೀತು ಮಾಡುತ್ತಾ, ತಪ್ಪಿದರೆ ಮೇಲಿನ ಅಧಿ ಕಾರಿಗಳಿಗೆ ದೂರು ಕೊಡಲಾಗುವುದೆಂದು ತಿಳಿಸಿದರು. ಕೆಲವು ಫಲಾನುಭವಿಗಳು ಹೇಳದೆ-ಕೇಳದೆ ಓಡಿ ಹೋದರು. ಚಿಕಿತ್ಸೆ ಪಡೆದವರು ಗೊಣಗಾಡುತ್ತಾ/ನೋವು ಅನುಭವಿಸುತ್ತಾ/ಹಿಡಿಶಾಪ ಹಾಕುತ್ತಾ ಅಲ್ಪ ಮೊತ್ತದ ಸಾಲ ಪಡೆದು ಊರಿಗೆ ಹಿಂತಿರುಗಿದರು. ಇಲಾಖೆಯ ಜುಜುಬಿ ಪ್ರೋತ್ಸಾಹಧನದಲ್ಲಿ ಸ್ವಲ್ಪ ಹಣವನ್ನು ದಲ್ಲಾಳಿಗಳು ತಮ್ಮ ಜೇಬಿಗೆ ಇಳಿಸಿದರೆಂದು ಕೆಲವರು ದೂರಿಕೊಂಡರು. ಈ ತರದ ಘಟನೆಗಳು ತುರ್ತುಪರಿಸ್ಥಿತಿಯಲ್ಲಿ ಎಷ್ಟು ನಡೆದಿದೆಯೋ ದೇವರೇ ಬಲ್ಲ! ಈ ಒಂದು ಕಹಿಘಟನೆ ನನ್ನ 'ನೆನಪಿನಂಗಳ'ದಲ್ಲಿ ಆಗಾಗ ಹಾದುಹೋಗುತ್ತಿದೆ.



## ಸಿ.ಎ.ಪರೀಕ್ಷೆ ಉತ್ತೀರ್ಣ

ಅಂಬಲಪಾಡಿ ರಜತ್.ಬಿ, ಸಿ.ಎ. ಫೈನಲ್ ಎರಡೂ ಗ್ರೂಪ್‌ಗಳನ್ನು ಒಟ್ಟಿಗೇ ಬರೆದು ತೇರ್ಗಡೆಯಾಗಿದ್ದಾರೆ. ಉಡುಪಿಯ ದೇವ್‌ಆನಂದ್ ಆ್ಯಂಡ್ ಕಂಪೆನಿಯ ಚಾರ್ಟರ್ಡ್ ಅಕೌಂಟ್‌ನಲ್ಲಿ ಆರ್ಟಿಕಲ್‌ಶಿಪ್ ಮಾಡಿರುವ ಅವರು ಅಂಬಲಪಾಡಿಯ ಬಿ.ಶಿವರಾಜ-ರಾಜೇಶ್ವರಿ ದಂಪತಿಯ ಪುತ್ರ

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

*With Best Complimemts From*

SRI M. SHAILESH RAO
B.E., Civil
Ph : 9448624324

Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.

Website : shreemaalavikaassociates.com

## ನಿಧನ



### ಶ್ರೀ ಎ.ವಿ.ಶ್ಯಾನುಭಾಗ್

ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ಸ್ಥಾಪಕ ಅಧ್ಯಕ್ಷರಾಗಿದ್ದು 15 ವರ್ಷಗಳ ಕಾಲ ಸಮಾಜ ಬಾಂಧವರ ಒಗ್ಗೂಡುವಿಕೆಗೆ ಕಾರಣಕರ್ತರಾಗಿದ್ದ ಶ್ರೀ ಎ.ವಿ.ಶ್ಯಾನುಭಾಗ್ ರವರು ತಾ.20-01-2017ರಂದು ನಿಧನಹೊಂದಿದರು. ಇವರು ಕಾಸರಗೋಡಿನ ಕನ್ನಡಪರ ಹೋರಾಟ-ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಹಿರಿಯ ನ್ಯಾಯವಾದಿ. ಕರ್ನಾಟಕ ಸಮಿತಿ, ಲಲಿತ ಕಲಾ ಸದನ, ಚಿನ್ಮಯಿ ಮಿಷನ್, ಲಯನ್ಸ್ ಕ್ಲಬ್ ಮುಂತಾದ ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿದ್ದರು. ಕೂಡ್ಲಿನ ಕುತ್ಯಾಳ ಶಿವಮಂಗಲ ಹಾಗೂ ವಿಷ್ಣುಮಂಗಲ ದೇವಸ್ಥಾನಗಳ ಆಡಳಿತ ಮೊಕ್ತೇಸರರಾಗಿ ಈ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಗಳಲ್ಲಿ ನೇತೃತ್ವ ವಹಿಸಿದ್ದರು. ಸ್ಥಾನಿಕ ಬ್ರಾಹ್ಮಣ ಸಭಾ, ಕಾಸರಗೋಡಿನ ಅಧ್ಯಕ್ಷರಾದ ಶ್ರೀ ಸುಕುಮಾರ್ ಆಲಂಪಾಡಿ ಇವರು ಸಂಘದ ವತಿಯಿಂದ ನಡೆದ ಸಂತಾಪ ಸೂಚನಾ ಸಭೆಯಲ್ಲಿ ಶ್ರೀಯುತರ ನಿಧನಕ್ಕೆ ಸಂತಾಪ ಸೂಚಿಸುತ್ತಾ ಕಾಸರಗೋಡಿನ ಸಾಂಸ್ಕೃತಿಕ-ಧಾರ್ಮಿಕ ರಂಗಕ್ಕೂ, ಸ್ಥಾನಿಕ ಬ್ರಾಹ್ಮಣ ಸಭೆಗೂ ಅವರ ಅಗಲುವಿಕೆಯಿಂದ ತುಂಬಲಾಗದ ನಷ್ಟವಾಗಿದೆಯೆಂದು ತಮ್ಮ ಸಂತಾಪದಲ್ಲಿ ಸೂಚಿಸಿದ್ದಾರೆ. ಸಂತಾಪಸೂಚನಾ ಸಭೆಯಲ್ಲಿ ಕಾರ್ಯದರ್ಶಿ ವಸಂತರಾಜ ವಿ.ಪಿ., ಸಂಘಟನೆಯ ಪದಾಧಿಕಾರಿಗಳು ಹಾಗೂ ನೂರಾರು ಸಮಾಜ ಬಾಂಧವರು ಹಾಜರಿದ್ದರು.

★★★★ ★★★★

### ಡಾ| ಜಯಲೀಲಾ ರಾವ್

ಪುತ್ತೂರು ವಿವೇಕಾನಂದ ಕಾಲೇಜಿನ ನಿವೃತ್ತ ಪ್ರೊಫೆಸರ್ ಡಾ| ಜಯಲೀಲಾ ರಾವ್‌ರವರು ತಾ.17-01-2017 ರಂದು ನಿಧನ ಹೊಂದಿದರು.

★★★★ ★★★★

### ಶ್ರೀಮತಿ ಲಕ್ಷ್ಮೀ

ಕಾಪು ಶ್ರೀ ಜನಾರ್ದನ ದೇವಸ್ಥಾನ ಬಳಿಯ ನಿವಾಸಿ ಶ್ರೀ ಕೆ.ಭಾಸ್ಕರ ರಾವ್ ಇವರ ಪತ್ನಿ ಶ್ರೀಮತಿ ಲಕ್ಷ್ಮೀ ಇವರು ತಾ.14-01-2016ರಂದು ಅಲ್ಪಕಾಲದ ಅಸೌಖ್ಯದಿಂದ ನಿಧನಹೊಂದಿದರು.

## ಶುಭ ವಿವಾಹ

ಶ್ರೀಮತಿ ಅಪರ್ಣ ಮತ್ತು ಶ್ರೀ ಪಿ. ಶ್ರೀನಿವಾಸ ರಾವ್ ಇವರ ಪುತ್ರಿ ತನ್ಮಯ್ ಮತ್ತು ಶ್ರೀಮತಿ ಸೌಮ್ಯ ಮತ್ತು ಶ್ರೀ ಎಮ್.ಸಿ.ರಾಮಕುಮಾರ್ ಇವರ ಪುತ್ರ ಕುಶಲ್ ಇವರ ವಿವಾಹವು ತಾ.15-01-2017ರಂದು ಬೆಂಗಳೂರಿನ ವಿ.ಕೆ.ಕನ್ವೆನ್ಶನ್ ಸೆಂಟರ್‌ನಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಶೀಲಾ ಮತ್ತು ಶ್ರೀ ವಸಂತರಾವ್ ಕರಂಬಳ್ಳಿ ಇವರ ಪುತ್ರ ವಿಕೇಶ ಹಾಗೂ ಶ್ರೀಮತಿ ಯಶೋಧಾ ಮತ್ತು ವೆಂಕಪ್ಪರವರ ಪುತ್ರಿ ಕಾವ್ಯಶ್ರೀ ಇವರ ವಿವಾಹವು ತಾ.15-01-2017ರಂದು ಉಡುಪಿ ಗೋವಿಂದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★ ★★★★

ಬ್ರಹ್ಮಾವರದ ಶ್ರೀಮತಿ ಶ್ರೀದೇವಿ ಹಾಗೂ ಡಾ.ವೈ.ರವೀಂದ್ರನಾಥ ರಾವ್ ಇವರ ಪುತ್ರ ಅಭೀಜ್ಞ ಹಾಗೂ ಮಡಿಯಾಲ ಡಾ| ವಿವೇಕಾನಂದ ಮತ್ತು ಶ್ರೀಮತಿ ಅನುರಾಧ ಇವರ ಪುತ್ರಿ ಅನುಷಾ ಇವರ ವಿವಾಹವು ಮಂಗಳೂರಿನ ಶಕ್ತಿನಗರದಲ್ಲಿರುವ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸುಧರ್ಮ ಸಭಾಭವನದಲ್ಲಿ ತಾ.19-01-2017ರಂದು ನೆರವೇರಿತು.

★★★★ ★★★★

ಶ್ರೀಮತಿ ದಾಕ್ಷಾಯಿಣಿ ಹಾಗೂ ವಿಜಯ ಪಿ.ರಾವ್ ಇವರ ಪುತ್ರಿ ವರ್ಷಾ ಹಾಗೂ ಸಾಸ್ತಾನ ಶ್ರೀಮತಿ ಕಾವೇರಿ ಮತ್ತು ಪಿ.ಗಂಗಾಧರ ಹೊಳ್ಳ ಇವರ ಪುತ್ರ ಮುರಳೀಧರ ಇವರ ವಿವಾಹವು ತಾ.29-01-2017ರಂದು ಉಡುಪಿಯ ಶ್ರೀ ಗೋವಿಂದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಪ್ರಭಾ ಮತ್ತು ಶ್ರೀ ಸುರೇಶ್ ಬಾಬುರಾವ್, ಕುಕ್ಕಿಕಟ್ಟೆ ಇವರ ಪುತ್ರಿ ಆಶ್ರಿತಾ ಮತ್ತು ಶ್ರೀಮತಿ ಸರೋಜ ಮತ್ತು ಶ್ರೀ ರಾಮಮಹೇಶ್ ಶರ್ಮ ಇವರ ಪುತ್ರ ತಪೋವನ್ ಇವರ ವಿವಾಹವು ಗ್ವಾಲಿಯರ್‌ನ ಗೋಲಿಕಾ ಮಂದಿರದ ಬೃಜ್‌ವಾಟಿಕಾದಲ್ಲಿ ತಾ.29-01-2017ರಂದು ನೆರವೇರಿತು.

★★★★ ★★★★

ಶ್ರೀಮತಿ ಶಶಿಕಲಾ ಮತ್ತು ಶ್ರೀ ಕಿರಣ್ ಪಿ.ಕೆ. ಇವರ ಪುತ್ರಿ ದಿಶಾ ಹಾಗೂ ದಿ| ಪ್ರಸನ್ನ ಕುಮಾರಿ ಮತ್ತು ಕೇದಿಗೆ ರಾಜಗೋಪಾಲ್ ಇವರ ಪುತ್ರ ಸುಹಾಸ್ ಇವರ ವಿವಾಹವು ಮಂಗಳೂರಿನ ಗೋಕುಲ ಕಲ್ಯಾಣ ಮಂಟಪದಲ್ಲಿ ತಾ.06-02-2017ರಂದು ನೆರವೇರಿತು.

## ವಿಳಾಸ ಬದಲಾವಣೆ

ಬೆಂಗಳೂರಿನ ತ್ಯಾಗರಾಜನಗರದಲ್ಲಿ ವಾಸವಾಗಿದ್ದ ಶ್ರೀ ಟಿ.ದೇವರಾಜ ಶ್ಯಾನುಭಾಗ್ ಈ ಕೆಳಗಿನ ವಿಳಾಸಕ್ಕೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿದ್ದಾರೆ

ಶ್ರೀ ಟಿ.ದೇವರಾಜ್ ಶ್ಯಾನುಭಾಗ್, ನಂ.104, ಎರಡನೇ ಮಾಳಿಗೆ , ಶ್ರೀ ಗಣೇಶ ಮಂದಿರ ರಸ್ತೆ, ಎರಡನೇ ಬ್ಲಾಕ್, ತ್ಯಾಗರಾಜನಗರ ಬೆಂಗಳೂರು-28

★★★★ ★★★★

ನಮ್ಮ ಪತ್ರಿಕೆಯ ಮಹಾಪೋಷಕರಾದ ಶ್ರೀ ಅನಂತರಾಮ ಶಾಸ್ತ್ರಿಯವರು ಈ ಕೆಳಗಿನ ವಿಳಾಸಕ್ಕೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿದ್ದಾರೆ

ಶ್ರೀ ಅನಂತರಾಮ ಶಾಸ್ತ್ರಿ ಎಸ್.ಬಿ.ಎಂ ಚೀಫ್ ಮ್ಯಾನೇಜರ್(ನಿವೃತ್ತ), ಫ್ಲಾಟ್ ನಂ.212 ಎರಡನೇ ಮಾಳಿಗೆ, ಕಲ್ಪತರು ಲೇಕ್ ವ್ಯೂ ಅಪಾರ್ಟ್‌ಮೆಂಟ್, ಪುಟ್ಟೇನಹಳ್ಳಿ ಮುಖ್ಯ ರಸ್ತೆ, ಜೆ.ಪಿ. ನಗರ, ಏಳನೇ ಹಂತ, ಬೆಂಗಳೂರು 78

## ಗೃಹಪ್ರವೇಶ

ಮೂಡುಬೆಳ್ಳೆ ಶ್ರೀ ಸದಾನಂದ ರಾವ್ ಹಾಗೂ ಶ್ರೀಮತಿ ಶಾರದಾ ದಂಪತಿಗಳ ಪುತ್ರ ಶ್ರೀ ರಾಜೇಶ ಹಾಗೂ ಡಾ| ಸಂಜನಾ ದಂಪತಿಗಳು ತಮ್ಮ ಮೂಡುಬೆಳ್ಳೆ ದೇವರಗುಡ್ಡೆಯಲ್ಲಿ ನಿರ್ಮಿಸಿದ ನೂತನ ಗೃಹ **ಶ್ರೀಶಾರದಾ** ಇದರ ಗೃಹಪ್ರವೇಶ ಸಮಾರಂಭವನ್ನು ತಾ.20-01-2017ರಂದು ನೆರವೇರಿಸಿದರು.

## ಬ್ರಹ್ಮೋಪದೇಶ

ಶ್ರೀಮತಿ ಸುಕನ್ಯಾ ಮತ್ತು ಶ್ರೀ ರಾಜೇಶ್ ಇವರ ಪುತ್ರ ಚಿ| ಸೃಜನ್ ಇವನ ಬ್ರಹ್ಮೋಪದೇಶ ಸಮಾರಂಭವು ಪರಾರಿ ವಿಷ್ಣುಮೂರ್ತಿ ದೇವಸ್ಥಾನದ ಬಳಿ ಇರುವ ಅವರ ಸ್ವಗೃಹದಲ್ಲಿ ತಾ.29-01-2017ರಂದು ನೆರವೇರಿತು.

★★★★ ★★★★

ಉಡುಪಿ ಬೈಲೂರಿನ ನಿವಾಸಿ ಡಾ| ಸುಬ್ರಹ್ಮಣ್ಯ ರಾವ್ ಹಾಗೂ ಮಂಗಳಾ ದಂಪತಿಗಳು ತಮ್ಮ ಪುತ್ರ ಕೃಪಾಲನ ಬ್ರಹ್ಮೋಪದೇಶ ಸಮಾರಂಭವನ್ನು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಶಾರದೃತ ಯಜ್ಞಾಂಗಣದಲ್ಲಿ ತಾ.30-01-2017ರಂದು ನೆರವೇರಿಸಿದರು.

## ಸಂಪೂರ್ಣ ನವಗ್ರಹ ಹೋಮ

ತಾ.18-01-2017ನೇ ಬುಧವಾರ ಉಡುಪಿಯಲ್ಲಿ ವಾಸವಾಗಿರುವ ಪಾವಂಜೆ ಭವಾನಿಶಂಕರ ಉಪಾಧ್ಯಾಯ (ತಿರುಪತಿ)ರಲ್ಲಿ ಸಂಪೂರ್ಣ ನವಗ್ರಹ ಹೋಮವನ್ನು ನೆರವೇರಿಸಲಾಯಿತು. ಈ ಹೋಮಕ್ಕೆ ಅಗ್ನಿಜನನವನ್ನು ಅರಣಿ ಮಂಥನ ಮಾಡಿ ಅಗ್ನಿಯನ್ನು ತೆಗೆದು ಹೋಮವನ್ನು ಮಾಡಲಾಯಿತು. ಅಗ್ನಿ ಮಂಥನವನ್ನು ನಮ್ಮವರೇ ಆದ ಪಾವಂಜೆ ಕಾರ್ತಿಕೇಯ ಉಪಾಧ್ಯಾಯ ಘನಪಾಠಿಯವರು ವಿಜಯವಾಡದಿಂದ ಬಂದು ಮಾಡಿರುವರು. ಈ ಅರಣಿಯು ಖದಿರ ಮತ್ತು ಅಶ್ವತ್ಥ ವೃಕ್ಷಗಳ ಸಂಯೋಜನೆಯಿಂದ ಅಗ್ನಿ ಉತ್ಪತ್ತಿ ಮಾಡಿ, ಪೂರ್ಣ ನವಗ್ರಹ ಹವನ ನೆರವೇರಿಸಲಾಯಿತು. ಈ ಸಮಾರಂಭದಲ್ಲಿ ಸಮಾಜದ ಗಣ್ಯ ವ್ಯಕ್ತಿಗಳು ಭಾಗವಹಿಸಿದರು.

-ಪಿ.ಪರೀಕ್ಷಿತ್ ಉಪಾಧ್ಯಾಯ.


# ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ| ಎಸ್. ಜನಾರ್ದನ್ ರಾವ್

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


## ಸೀಮಂತೋನ್ನಯನ

ಶ್ರೀಮತಿ ಮತ್ತು ಶ್ರೀ ಬಾಲಕೃಷ್ಣರಾಯರ ಪುತ್ರ ಶ್ರೀ ರಾಘವೇಂದ್ರ ಇವರ ಪತ್ನಿ ಸ್ವಾತಿ ಯವರ ಸೀಮಂತೋನ್ನಯನ ಸಮಾರಂಭವು ತಾ09-02-2017ರಂದು ಕುಂಜಿಬೆಟ್ಟಿನ ಜ್ಞಾನಮಂದಿರದಲ್ಲಿ ನೆರವೇರಿತು.

## ಜನನ

ದಿ| ಜಯರಾಮರಾವ್ ಮತ್ತು ಪುಷ್ಪಲತಾ ದಂಪತಿಗಳ ಪುತ್ರ ಶ್ರೀ ಸಂದೇಶ ಹಾಗೊ ಶ್ರೀಮತಿ ಅರ್ಚನಾ ದಂಪತಿಗಳಿಗೆ 09-01-2017 ರಂದು ಗಂಡುಮಗುವಿನ ಜನನವಾಗಿರುತ್ತದೆ

## ಕುಂಭ ಮಾಸದ ವಿಶೇಷ ದಿನಗಳು

| | |
|---|---|
| 12-02-2017 | ಕುಂಭ ಸಂಕ್ರಮಣ |
| 14-02-2017 | ಸಂಕಷ್ಟಹರ ಚತುರ್ಥಿ |
| 22-02-2017 | ಸರ್ವೈಕಾದಶಿ |
| 24-02-2017 | ಮಹಾಶಿವರಾತ್ರಿ |
| 26-02-2017 | ಅಮಾವಾಸ್ಯೆ |
| 08-03-2017 | ಸರ್ವೈಕಾದಶಿ |
| 12-03-2017 | ಹೋಳಿ ಹುಣ್ಣಿಮೆ, ಕಾಮದಹನ |
| 14-03-2017 | ಮೀನ ಸಂಕ್ರಮಣ |
| 14-03-2017 | ಶ್ರೀಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ |
| 16-03-2017 | ಸಂಕಷ್ಟಹರ ಚತುರ್ಥಿ |


# ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

# ಯಶಸ್ವೀ ಎಂಟರ್‌ಪ್ರೈಸೆಸ್

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.

ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



# RAJESH POWER PRESS




PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS



**Buying and selling shares as easy as checking your emails**

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಡಾ। ವೈ ಚಂದ್ರಶೇಖರ್ ರಾವ್‌ರವರ ಭಾವಚಿತ್ರ ಅನಾವರಣ



ನಮ್ಮ ಸಂಘದ ಹಾಗೂ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾಗಿ ಸೇವೆಸಲ್ಲಿಸಿದ್ದ ಉಡುಪಿ ಕುಕ್ಕಿಕಟ್ಟೆಯ ದಿ। ಡಾ। ವೈ. ಚಂದ್ರಶೇಖರ ರಾವ್ ಇವರ ಭಾವಚಿತ್ರದ ಅನಾವರಣವು ತಾ.22–01–2017ರಂದು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು. ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್.ರಾವ್‌ರವರು ಭಾವಚಿತ್ರವನ್ನು ಅನಾವರಣಗೊಳಿಸಿ ಶ್ರೀಯುತರ ವ್ಯಕ್ತಿತ್ವದ ಬಗ್ಗೆ ಗುಣಗಾನ ಮಾಡಿದರು. ಡಾ। ವೈ.ಚಂದ್ರಶೇಖರ ರಾಯರು ನಮ್ಮ ಸಂಘದ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ಸಲಹೆ ಹಾಗೂ ದೇಣಿಗೆಗಳನ್ನಿತ್ತು ಸಹಕರಿಸಿದವರು, ಶ್ರೀ ಶಾರದಾ ಪತ್ರಿಕೆಯು ಆರಂಭವಾದ ಕೂಡಲೆ ಅದಕ್ಕೆ ಮಹಾಪೋಷಕರಾಗಿ ಪ್ರೋತ್ಸಾಹಿಸಿದವರು, ವೈದ್ಯರಾಗಿಯೂ ಹಾಗೂ ವೈಯುಕ್ತಿಕ ನೆಲೆಯಲ್ಲಿಯೂ ನಮ್ಮ ಸಮಾಜಬಾಂಧವರಿಗೆ ಸಹಾಯ ಹಾಗೂ ಸೇವೆಯನ್ನು ಸಲ್ಲಿಸಿದವರು ಎಂದು ಅವರನ್ನು ಸ್ಮರಿಸಿದರು. ಡಾ। ವೈ.ಚಂದ್ರಶೇಖರ ರಾಯರ ಪತ್ನಿ ಶ್ರೀಮತಿ ಇಂದಿರಾ ಹಾಗೂ ಅವರ ಪುತ್ರ ಡಾ। ವೈ. ಸುದರ್ಶನ ರಾವ್ ಸಮಾರಂಭಕ್ಕೆ ಆಗಮಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾವ್ ತನ್ನ ಸ್ವಂತ ಅಣ್ಣನಾದ ಡಾ। ವೈ. ಚಂದ್ರಶೇಖರ ರಾಯರನ್ನು ಸ್ಮರಿಸಿ ಅವರ ನೆನಪಿನಲ್ಲಿ ವಿಳಾಸ ಪುಸ್ತಕದ ಪ್ರಕಟಣೆಯ ನಿಮಿತ್ತ ಸಂಘಕ್ಕೆ 25,000 ರೂ.ಗಳ ದೇಣಿಗೆಯಿತ್ತ ಅವರ ಪುತ್ರ ಡಾ। ವೈ.ಸುದರ್ಶನ ರಾಯರನ್ನು ಅಭಿನಂದಿಸಿದರು.

## ಶ್ರೀ ಶಾರದಾ ಕ್ರಿಕೆಟ್ ಟ್ರೋಫಿಯ ಪ್ರಾಯೋಜಕರು

ತಾ.22–01–2017ರಂದು ಜರಗಿದ ರಜತ ಮಹೋತ್ಸವವನ್ನಾಚರಿಸುತ್ತಿರುವ ಶ್ರೀಶಾರದಾ ಕ್ರಿಕೆಟ್ ಟ್ರೋಫಿಯ ಪ್ರಥಮ ಬಹುಮಾನವನ್ನು ಅಲೆವೂರಿನ ಶ್ರೀ ಶ್ಯಾಮರಾವ್ ಇವರು ತಮ್ಮ ಮಾತಾಪಿತೃಗಳಾದ ದಿ। ಅಲೆವೂರು ಭುಜಂಗ ರಾವ್ ಮತ್ತು ದಿ। ಶಾಂತಾದೇವಿ ಸ್ಮರಣಾರ್ಥ ರೂ.10,000 ದೇಣಿಗೆಯಿತ್ತು ಪ್ರಾಯೋಜಿಸಿದ್ದಾರೆ. ಹಾಗೆಯೇ ದ್ವಿತೀಯ ಬಹುಮಾನವನ್ನು ಎಲ್ಲೂರು ಸಜೆ ಜನಾರ್ದನ ರಾವ್ ಇವರು ತಮ್ಮ ಮಾತಾ ಪಿತೃಗಳಾದ ದಿ। ಸರ್ವೋತ್ತಮ ರಾವ್ ಹಾಗೂ ದಿ। ಕಾಶಿಯಮ್ಮರವರ ಸ್ಮರಣಾರ್ಥ ರೂ.6,000/- ದೇಣಿಗೆಯಿತ್ತು ಪ್ರಾಯೋಜಿಸಿದ್ದಾರೆ. ಶ್ರೇಷ್ಠ ಬೌಲರ್, ಅತ್ಯುತ್ತಮ ದಾಂಡಿಗ ಹಾಗೂ ಅತ್ಯುತ್ತಮ ಆಲ್‌ರೌಂಡರ್ ಪ್ರಶಸ್ತಿಗಳನ್ನು ಉಡುಪಿಯ ಬಜೆ ಜಯರಾಮರಾವ್ ಹಾಗೂ ವೀಣಾ ದಂಪತಿಗಳು ರೂ.3,000/- ದೇಣಿಗೆಯಿತ್ತು ಪ್ರಾಯೋಜಿಸಿದ್ದಾರೆ. ಅನೇಕ ಸಂಖ್ಯೆಯಲ್ಲಿ ನಮ್ಮ ಸಮಾಜ ಬಾಂಧವರು ತನುಮನಧನ ಸಹಕಾರವನ್ನಿತ್ತು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಿದ್ದಾರೆ. ಈ ಎಲ್ಲಾ ಕಾರ್ಯಕರ್ತರಿಗೆ ಆಡಳಿತ ಮಂಡಳಿಯು ಧನ್ಯವಾದಗಳನ್ನು ಅರ್ಪಿಸುತ್ತದೆ.

## ಮಹಿಳಾ ವೇದಿಕೆಯಿಂದ ಸ್ಪರ್ಧಾಟಗಳು



ತಾ.22–01–2017ರಂದು ಮೈದಾನದಲ್ಲಿ ಯುವವೇದಿಕೆಯಿಂದ ಕ್ರಿಕೆಟ್ ಪಂದ್ಯಾಟ ನಡೆಯುತ್ತಿದ್ದಂತೆ ಮಹಿಳಾವೇದಿಕೆಯಿಂದ ಮಹಿಳೆಯರು ಹಾಗೂ ಮಕ್ಕಳಿಗೆ ಶ್ರೀ ಶಾರದಾಮಂಟಪದಲ್ಲಿ ವಿವಿಧ ಸ್ಪರ್ಧಾಟಗಳನ್ನು ನಡೆಸಲಾಯಿತು. ಈ ಸ್ಪರ್ಧಾಟಗಳನ್ನು ದೀಪ ಬೆಳಗಿಸಿ ಉದ್ಘಾಟಿಸಲಾಯಿತು. ಮೂರು ವರ್ಷದ ವಯಸ್ಸಿನ ಮಕ್ಕಳಿಂದ ಹಿಡಿದು ಎಪ್ಪತ್ತು ಮೇಲ್ಪಟ್ಟವರ ತನಕ ಅನೇಕ ಸಮಾಜ ಬಾಂಧವರು ಹುಮ್ಮಸ್ಸಿನಿಂದ ಈ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಶ್ರೀಮತಿ ಗೀತಾ, ಶ್ರೀಮತಿ ವಿದ್ಯಾ, ಶ್ರೀಮತಿ ರಜನಿ, ಶ್ರೀಮತಿ ಶುಭಾ, ಶ್ರೀಮತಿ ಹರಿಣಾಕ್ಷಿ ನಾಗರಾಜ್, ಶ್ರೀಮತಿ ಮೀರಾ, ಶ್ರೀಮತಿ ಪ್ರೀತಿ ಇವರು ಸ್ಪರ್ಧೆಗಳನ್ನು ನಡೆಸಿಕೊಟ್ಟರು. ಮಧ್ಯಾಹ್ನದ ಭೋಜನದ ನಂತರ ಮಹಿಳಾವೇದಿಕೆಯ ವತಿಯಿಂದ ಸಭಾಕಾರ್ಯಕ್ರಮವು ಕುಮಾರಿ ಪ್ರೇರಣಾರವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರ ರಾಯರು ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಡುಪಿಯ ಸರಕಾರಿ ಹೆಂಗಸರ ಹಾಗೂ ಮಕ್ಕಳ ಆಸ್ಪತ್ರೆಯ ಹಿರಿಯ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ ಡಾ। ವಿಜಯಾ ವೈ.ಬಿ.ರವರು ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. ಶ್ರೀಮತಿ ಪ್ರೀತಿ ಇವರು ಅತಿಥಿಗಳನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಕೆ. ಸುರೇಶ ರಾವ್, ಕೋಶಾಧಿಕಾರಿ ಶ್ರೀ ಕೆ. ಸುಧಾಕರ್ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಜಯಲಕ್ಷ್ಮಿ ಮುರಳೀಧರ್, ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಉಷಾ ಶ್ಯಾನುಭಾಗ್, ಸಂಘದ ಉಪಾಧ್ಯಕ್ಷ ಡಾ। ವೈ. ಸುದರ್ಶನ್ ರಾವ್, ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್.ರಾವ್ ಇವರು ವೇದಿಕೆಯಲ್ಲಿದ್ದರು. ಡಾ। ವಿಜಯಾ ವೈ.ಬಿ.ಯವರು ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ತೆಗೆದುಕೊಳ್ಳಬೇಕಾದ ಕಾಳಜಿ ಹಾಗೂ ವಯಸ್ಸಾದಂತೆ ತಮಗೆ ವಿಶೇಷವಾಗಿ ಬರಬಹುದಾದ ಸ್ತನದ ಹಾಗೂ ಗರ್ಭಕೋಶದ ಕ್ಯಾನ್ಸರ್ ಅನ್ನು ಮುಂಚಿತವಾಗಿ ಪತ್ತೆಹಚ್ಚುವ ತಪಾಸಣೆಗಳ ಬಗ್ಗೆ ವಿವರಿಸಿದರು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಸಂಘದ ನಿರ್ದೇಶಕರಾಗಿದ್ದ ದಿ। ಡಾ। ವೈ. ಚಂದ್ರಶೇಖರ ರಾವ್‌ರವರ ಭಾವಚಿತ್ರದ ಅನಾವರಣ ಕಾರ್ಯಕ್ರಮವು ಶ್ರೀ ಸಿ.ಎಸ್.ರಾಯರಿಂದ ನೆರವೇರಿತು. ಶ್ರೀಮತಿ ನಾಗವಲ್ಲಿ ಇವರು ಧನ್ಯವಾದ ಸಮರ್ಪಿಸಿದರು. ಶ್ರೀಮತಿ ಸುನೀತ ಕಾರ್ಯಕ್ರಮವನ್ನು ನಿರೂಪಿಸಿದರು.

## ಶುಭ ಹಾರೈಕೆಗಳು



**ಚಿ। ಸುಹಾಸ ಹಾಗೂ ಚಿ। ಸೌ। ದಿಶಾ**

**ನೂತನ ವಧೂವರರಿಗೆ ಶುಭ ಹಾರೈಸುವ,**

ಶ್ರೀಮತಿ ಮತ್ತು ಶ್ರೀ ದೇವರಾವ್, ಕೆಳಗಿನ ಕೇದಿಗೆ
ಶ್ರೀಮತಿ ಮತ್ತು ಶ್ರೀ ಕುಮಾರ ಸ್ವಾಮಿ, ಮೂಡುಗೆರೆ
ಶ್ರೀಮತಿ ಮತ್ತು ಶ್ರೀ ಆನಂದ ರಾವ್, ಮೂಡುಗೆರೆ
ಶ್ರೀಮತಿ ಮತ್ತು ಶ್ರೀ ಬಾಲಕೃಷ್ಣ ರಾವ್ ಹಾಗೂ ಸಹೋದರರು, ಕೊಕ್ರಾಡಿ
ಶ್ರೀಮತಿ ಶಶಿಕಲಾ ಮತ್ತು ಶ್ರೀ ಕಿರಣ್ ಪಿ.ಕೆ.
ಶ್ರೀಮತಿ ಅನ್ವಿತಾ ಮತ್ತು ಶ್ರೀ ಸುದರ್ಶನ್ ರಾವ್, ಕುತ್ಪಾಡಿ
ಶ್ರೀಮತಿ ನಾಗವಲ್ಲಿ ಮತ್ತು ಶ್ರೀ ಕೆ. ಸುರೇಶ್ ರಾವ್, ಕುತ್ಪಾಡಿ

## ಶುಭ ಹಾರೈಕೆಗಳು



**ಚಿ। ಅಭಿಜ್ಞ ಹಾಗೂ ಚಿ। ಸೌ। ಅನುಷ**

**ನೂತನ ವಧೂವರರಿಗೆ ಶುಭ ಹಾರೈಸುವ,**

ಶ್ರೀಮತಿ ಶ್ರೀದೇವಿ ಮತ್ತು ಡಾ। ವೈ. ರವೀಂದ್ರನಾಥ ರಾವ್, ಬ್ರಹ್ಮಾವರ
ವೈ. ಆದೀಶ್ ರಾವ್ ಬ್ರಹ್ಮಾವರ
ಶ್ರೀಮತಿ ಅನುರಾಧಾ ಮತ್ತು ಡಾ। ಎಮ್.ವಿವೇಕಾನಂದ, ಕೂಡ್ಲಿಪೇಟೆ
ಶ್ರೀಮತಿ ಶಾಂತಾ ಮತ್ತು ವೈ. ಜಗದೀಶ ರಾವ್ ಹಾಗೂ ಕುಟುಂಬಸ್ಥರು
ಶ್ರೀಮತಿ ವಿಜಯ ಮತ್ತು ಶ್ರೀ ಪಿ. ಭಾಸ್ಕರ ಶರ್ಮ ಹಾಗೂ ಕುಟುಂಬಸ್ಥರು
ಶ್ರೀಮತಿ ಎಮ್. ರತ್ನಾ ವಿಷ್ಣು ಶರ್ಮ ಹಾಗೂ ಮಕ್ಕಳು, ಪುತ್ತೂರು
ಶ್ರೀಮತಿ ಪಾರ್ವತಿ ಮತ್ತು ಶ್ರೀ ಕೇದಿಗೆ ವಿಠಲ ರಾವ್ ಹಾಗೂ ಮಕ್ಕಳು
ಶ್ರೀಮತಿ ಅರ್ಚನಾ ಮತ್ತು ಡಾ। ವೈ. ಅವನೀಂದ್ರನಾಥ ರಾವ್, ನವದೆಹಲಿ
ಶ್ರೀ ವೈ. ಜ್ಯೋತೀಂದ್ರನಾಥ ರಾವ್ ಹಾಗೂ ಸಹೋದರಿಯರು ಮತ್ತು ಭಾವಂದಿರು, ಉಚ್ಚಿಲ
ಶ್ರೀಮತಿ ಕೀರ್ತನಾ ಮತ್ತು ಎಮ್. ವಿಶ್ವನಾಥ, ಮಂಗಳೂರು

# "ಸುಬ್ರಹ್ಮಣ್ಯ ಟ್ರೋಫಿ 2017"



ದಿನಾಂಕ: 15.01.2017ನೇ ರವಿವಾರ ನಮ್ಮ ಸಂಘದ ಹಾಗೂ ಯುವ ವೇದಿಕೆಯ ಜಂಟಿ ಆಶ್ರಯದಲ್ಲಿ ಸುರತ್ಕಲ್ ಗೋವಿಂದ ದಾಸ ಕಾಲೇಜಿನ ಕ್ರೀಡಾಂಗಣದಲ್ಲಿ "ಸುಬ್ರಹ್ಮಣ್ಯ ಟ್ರೋಫಿ 2017"ರ ಕ್ರಿಕೆಟ್ ಪಂದ್ಯಾಟವು ಜರಗಿತು. ಈ ಪಂದ್ಯಾಟವು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದ್ದು, ರಾಜ್ಯಾದ್ಯಂತದಿಂದ 12 ತಂಡಗಳು ಭಾಗವಹಿಸಿದ್ದವು.

ಬೆಳಿಗ್ಗೆ 9:00 ಗಂಟೆಗೆ ಸರಿಯಾಗಿ ಸಂಘದ ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಇವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮವು ಆರಂಭಗೊಂಡಿತು. ವೇದಿಕೆಯಲ್ಲಿ ಶ್ರೀ ಅಕ್ಷಯ್ ಬಂಗೇರ (ಅಕ್ಷಯ್ ಡೆವಲಪರ್ಸ್ ಸುರತ್ಕಲ್), ಶ್ರೀನಿವಾಸ ಅಮೀನ್ (ಗುತ್ತಿಗೆದಾರರು, ಯುವ ಉದ್ಯಮಿ ಚೇಳ್ಯಾರು), ಶ್ರೀಮತಿ ಕಾಂಚನಮಾಲಾ (ನಿವೃತ್ತ ಶಿಕ್ಷಕಿ ಮುಕ್ಕ), ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್, "ಉಡಲ್" ಸಿನೆಮಾದ ನಿರ್ದೇಶಕರಾದ ಶ್ರೀ ಕೆ. ರವಿಕುಮಾರ್, ನಾಯಕ ನಟರಾದ ಶ್ರೀ ಬೃಜೇಶ್, ಯುವ ವಿಭಾಗದ ಅಧ್ಯಕ್ಷರಾದ ಸಂಕೇತ್ ಶಾನ್‌ಭಾಗ್ ಇವರು ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಿಗೆ ಗುಲಾಬಿ ಹೂ ನೀಡಿ ಶಾಲು ಹೊದಿಸಿ ಗೌರವಿಸಲಾಯಿತು. ದೀಪವನ್ನು ಬೆಳಗುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಲಾಯಿತು. ಅತಿಥಿಗಳು "ಆಟಗಾರರು ಕ್ರೀಡಾಸ್ಫೂರ್ತಿಯಿಂದ ಆಡಿ ಆಟವನ್ನು ಯಶಸ್ವಿಗೊಳಿಸುವಂತೆ" ಹಾರೈಸಿದರು. ನಂತರ ಅತಿಥಿಗಳು ಮೈದಾನಕ್ಕೆ ತೆರಳಿ ಬಂದಿರುವ ತಂಡಗಳ ಪರಿಚಯವನ್ನು ಪಡೆದು ಆಟವಾಡುವುದರ ಮೂಲಕ ಆಟವನ್ನು ಉದ್ಘಾಟಿಸಿದರು. ಈ ಕ್ರಿಕೆಟ್ ಪಂದ್ಯಾಟದಲ್ಲಿ ಬೆಂಗಳೂರು, ಕಾಪು, ಪಡುಬಿದ್ರಿ, ವಿಟ್ಲ, ಬೆಳ್ತಂಗಡಿ, ಪೊಳಲಿ, ಸುರತ್ಕಲ್, ಕುಂದಾಪುರ, ನಂದಳಿಕೆ, ಇತ್ಯಾದಿ ತಂಡಗಳು ಭಾಗವಹಿಸಿದ್ದವು.

ಸಂಜೆ 5:00 ಗಂಟೆಗೆ ಸಮಾರೋಪ ಸಮಾರಂಭವು ನಡೆಯಿತು. ಈ ಸಮಾರಂಭದಲ್ಲಿ ಎಂ.ಸಿ.ಎಫ್. ಕಂಪೆನಿಯ ಆಡಳಿತ ನಿರ್ದೇಶಕರಾದ ಶ್ರೀ ಕೆ. ಪ್ರಭಾಕರ ರಾವ್ ಮಂಗಳೂರು, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಮನೀಷ್ ರಾವ್, ಯುವ ಉದ್ಯಮಿ ಶ್ರೀ ಸಂತೋಷ್ "ಕುಮಾರ್ ಮಾಲೆಮಾರ್, ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಾಧವ ರಾವ್, ಶ್ರೀಮತಿ ಪರಿಮಳ ಪ್ರಶಾಂತ್, ಶ್ರೀ ಸಂಕೇತ್ ಶಾನುಭಾಗ್ ಮುಂತಾದ ಗಣ್ಯರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾದ ಶ್ರೀಯುತ ಕೆ. ಪ್ರಭಾಕರ ರಾಯರು ಮಾತನಾಡುತ್ತಾ "ಆಟಗಾರರು ಸ್ವಯಂಸ್ಫೂರ್ತಿಯಿಂದ ಆಟದಲ್ಲಿ ಭಾಗವಹಿಸಿ ಆಟದ ಹೊರಗೂ ಒಳಗೂ ಸ್ವಯಂ ಶಿಸ್ತನ್ನು ಅಳವಡಿಸಿಕೊಳ್ಳಬೇಕು ಎಂದರು.

ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗರು ಸ್ವಾಗತಿಸಿದರು, ಸಂಘದ ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್ ಚಿತ್ರಾಪುರ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಗಳಾದ ಶ್ರೀ ಪಾಲಚಂದ್ರ ಶರ್ಮ, ಜೊತೆ ಕಾರ್ಯದರ್ಶಿಗಳಾದ ಶ್ರೀ ಸುಕುಮಾರ ಎಂ. ಯು., ಶ್ರೀ ಪ್ರವೀಣ್ ಕುಮಾರ್ ಮಲ್ಲಮಾರ್, ಶಿವಪ್ರಸಾದ್ ಶಾನುಭೋಗ್ ಹಾಗೂ ಯುವ ವೇದಿಕೆಯ ಕಾರ್ಯದರ್ಶಿಯವರಾದ ಶಿವಪ್ರಸಾದ್ ಅದ್ಯಪಾಡಿ ಮುಂತಾದವರು ಉಪಸ್ಥಿತರಿದ್ದರು.


*With Best Compliments from :*




**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)


## ಚಿ| ವಿಕೇಶ್ ಮತ್ತು ಚಿ| ಸೌ|| ಕಾವ್ಯಶ್ರೀ



### ಕೃತಜ್ಞತೆಗಳು

ದಿನಾಂಕ 15-01-2017ರಂದು ಶ್ರೀ ಗೋವಿಂದ ಕಲ್ಯಾಣ ಮಂಟಪದಲ್ಲಿ ನಡೆದ ನಮ್ಮ ಪುತ್ರ ಚಿ| ವಿಕೇಶ್ ಹಾಗೂ ಚಿ| ಸೌ ಕಾವ್ಯಶ್ರೀರವರ ವಿವಾಹ ಮತ್ತು ದಿನಾಂಕ 16-01-2017ರಂದು ಶ್ರೀಶಾರದಾ ಮಂಟಪದಲ್ಲಿ ನಡೆದ ಆರತಕ್ಷತೆ ಸಮಾರಂಭಗಳಿಗೆ ಆಗಮಿಸಿ, ನೂತನ ವಧೂ-ವರರನ್ನು ಆಶೀರ್ವದಿಸಿ ನಮ್ಮನ್ನು ಹರಸಿದ ಎಲ್ಲಾ ಬಂಧು ಬಾಂಧವರಿಗೆ, ಮಿತ್ರರಿಗೆ, ಹಿತೈಷಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುವ

**ಶ್ರೀಮತಿ ಶೀಲಾ ಮತ್ತು ಶ್ರೀ ವಸಂತರಾವ್ ಕರಂಬಳ್ಳಿ**
**ಕುಮಾರಿ ವಿಜೇತ ವಸಂತ ರಾವ್**

'ರತ್ನ ದೀಪ', ಕೃಷ್ಣರಾವ್ ಕಂಪೌಂಡ್, ಕರಂಬಳ್ಳಿ, ಕುಂಜಿಬೆಟ್ಟು ಪೋಸ್ಟ್, ಉಡುಪಿ-576102.
ಮೊಬೈಲ್ : 9632291183

## ಬೃಹತ್ ರಕ್ತದಾನ ಶಿಬಿರ

ಫ್ರೆಂಡ್ಸ್ ಗ್ರೂಪ್ ಉಡುಪಿ ಮತ್ತು ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು ಉಡುಪಿ ಮತ್ತು ಅದರ ಹಳೆ ವಿದ್ಯಾರ್ಥಿ ಸಂಘ ಜಂಟಿಯಾಗಿ ಆಯೋಜಿಸುತ್ತಿರುವ ಬೃಹತ್ ರಕ್ತದಾನ ಶಿಬಿರವು ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಯ ಸಹಯೋಗದೊಂದಿಗೆ ದಿನಾಂಕ 11-03-2017ನೇ ಶನಿವಾರ 9-00 ಗಂಟೆಯಿಂದ ನಡೆಯಲಿದೆ.

ಸ್ಥಳ : ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು, ಕುಂಜಿಬೆಟ್ಟು, ಉಡುಪಿ.
ವಿವರಗಳಿಗೆ ಸಂಪರ್ಕಿಸಿರಿ : ವಸಂತ ರಾವ್ ಕರಂಬಳ್ಳಿ, 9632291183


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010-11 ರಿಂದ 2015-16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



**With Best Compliments From :**



SMT. VIDYA & SRI K. VASUDEVA RAO

*Deepika Digital Studio & Video*
*Deepika International Travels*

**WE UNDERTAKE**

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assistance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org